# ಕರುನಾಡ ಸುದ್ದಿ

ಸಂಪಾದಕರು: ವೈ.ಕೆ.ಪ್ರವೀಣ್ ಕುಮಾರ್

Editor: Y.K. PRAVEEN KUMAR

KARUNADA SUDDI

ಕನ್ನಡ ದಿನಪತ್ರಿಕೆ kannada Daily

Volume-04 Issue: 290 R.N.I No: KARKAN/2021/81166 KA/SK/CTA-858/2025-2027 Date: 10-08-2025 Sunday Page:04 Price:Rs.3-00 9902969820 Email: karunadasuddi2020@gmail.com


ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ

# ‘ಅಭಿವೃದ್ಧಿ ವಿಷಯದಲ್ಲಿ ತಾರತಮ್ಯ ಮಾಡಲ್ಲ’

**ಬೆಂಗಳೂರು:** ‘ಯಾವುದೇ ಪಕ್ಷಕ್ಕೆ ಸೇರಿದರೂ, ತಾರತಮ್ಯ ಮಾಡದೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು ನಮ್ಮ ಕರ್ತವ್ಯ. ಪಕ್ಷಾತೀತವಾಗಿ ಸಮಸ್ಯೆಗಳನ್ನು ಯಾರೇ ಗಮನಕ್ಕೆ ತಂದರೂ ಎಷ್ಟೇ ಒಳ್ಳೆಯದನ್ನು ಮಾಡಿ ದರೂ, ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಬಿಂಬಿಸುತ್ತಾರೆ.

ಇತ್ತೀಚೆಗೆ ಸಿಗಂದೂರು ವಿಚಾರದಲ್ಲೂ



ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬಗೆಹರಿಸಲಾಗುವುದು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ಸೊರಬ ಬೆಂಗಳೂರು ನಿವಾಸಿಗಳ ‘ಟೀಮ್ ಸಮ್ಮಿಲನ’ ವತಿಯಿಂದ ಆಯೋಜಿ ಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು. ಸೊರಬ ಕ್ಷೇತ್ರದ ಅಭಿವೃದ್ಧಿಗಾಗಿ ಅನೇಕ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ನಮ್ಮ ಕ್ಷೇತ್ರದ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸುವ ಉದ್ದೇಶದಿಂದ ಎಲ್ಲ ಕೆಲಸವನ್ನು ಬದಿಗೊತ್ತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇನೆ. ಇದೊಂದು ಸ್ಮರಣೀಯ ಕಾರ್ಯಕ್ರಮ. ಇದನ್ನು ಹೀಗೆಯೇ ಮುಂದುವರಿಸಲಾಗುವುದು’ ಎಂದರು. ನಾನು ಹಾಗೇ ಆಯಿತು. ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡುವವರಿಗೆ ಮುಂದೆ ಸಿಗಂದೂರು ಚೌಡೇಶ್ವರಿಯೇ ಬುದ್ದಿ ಕಲಿಸುತ್ತಾಳೆ’ ಎಂದರು.

ಕಾರ್ಯಕ್ರಮದಲ್ಲಿ 25 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಲಾ ?15 ಸಾವಿರ ನಗದು, ಫಲಕ ನೀಡಿ ಗೌರವಿಸಲಾಯಿತು.

ಸೊರಬ ನಿವಾಸಿಗಳ ಟೀಮ್ ಸಮ್ಮಿಲನದ ಮುಖ್ಯಸ್ಥ ಏಕಾಂತಪ್ಪ ಕುಮ್ಮೂರು, ವಕೀಲ ಕೇಶವಮೂರ್ತಿ ಹಾಲಗಳಲೆ, ದತ್ತಾತ್ರೇಯ ಬಿದರಗೆರೆ, ಕಲ್ಯಾಣ ಕುಮಾರ್ ತವನಂದಿ, ಶೇಖರಪ್ಪ ಹರೂರು, ಮುಕುಂದ ಹಿರೇಇಡಗೋಡು, ಗಣೇಶ್ ಹುಲ್ತಿಕೊಪ್ಪ, ಗಣಪತಿ ಹಳೇ ಸೊರಬ, ಪೀತಾಂಬರ ಕೆರೆಕೊಪ್ಪ ಮತ್ತಿತರರು ಭಾಗವಹಿಸಿದ್ದರು.

ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್ ಹೇಳಿಕೆ

# ಪಠ್ಯದ ಜೊತೆ ಸೃಜನಶೀಲ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಿ



ಜೋಗಿಮಟ್ಟಿ ರಸ್ತೆಯ ಪರಿಶಿಷ್ಟ ವರ್ಗಗಳ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ನಡೆದ ಸುಗಮ ಸಂಗೀತ, ಹಾರ್ಮೋನಿಯಂ ಹಾಗೂ ತಬಲಾ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್ ಉದ್ಘಾಟಿಸಿದರು.

**ಚಿತ್ರದುರ್ಗ:** ‘ವಿದ್ಯಾರ್ಥಿಗಳು ಪಠ್ಯದ ಕಲಿಕೆ ಜೊತೆಗೆ ಸೃಜನಶೀಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಭವಿಷ್ಯದಲ್ಲಿ ಉತ್ತಮ ಅವಕಾಶಗಳು ದೊರೆತು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಿದೆ’ ಎಂದು ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್ ಹೇಳಿದರು.

ನಗರದ ಜೋಗಿಮಟ್ಟಿ ರಸ್ತೆಯ ಪರಿಶಿಷ್ಟ ವರ್ಗಗಳ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆದ ಸುಗಮ ಸಂಗೀತ, ಹಾರ್ಮೋನಿಯಂ ಹಾಗೂ ತಬಲಾ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಉತ್ತಮ ಅಂಕ ಗಳಿಸಿ ಉತ್ತೀರ್ಣರಾಗುವ ವಿದ್ಯಾರ್ಥಿಗಳು ಮಾತ್ರ ಪ್ರತಿಭಾವಂತರಲ್ಲ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವವರು ಸಹ ಪ್ರತಿಭಾವಂತರಾಗಿ ನಮ್ಮ ನಾಡಿನ ಹಾಗೂ ದೇಶಕ್ಕೆ ಕೀರ್ತಿ ತರಲು ಸಾಧ್ಯವಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಯುವ ಜನರ ಪ್ರತಿಭೆಗಳ ಅನಾವರಣಕ್ಕೆ ಯುವ ಸೌರಭ, ಸಾಂಸ್ಕೃತಿಕ ಸೌರಭ, ಸುಗ್ಗಿ-ಹುಗ್ಗಿ, ಜನಪರ ಉತ್ಸವ, ಗಿರಿಜನ ಉತ್ಸವ, ಚಿಗುರು ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರತಿಭೆ ತೋರಿಸಬೇಕು’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ಎಂ. ಗುರುನಾಥ್ ಮಾತನಾಡಿ ‘ಮಾನಸಿಕ ನೆಮ್ಮದಿ ಹಾಗೂ ಹರ್ಷವನ್ನು ಕೊಡುವ ಮಾಧ್ಯಮ ಸಂಗೀತ, ಕಲಾ ಮಾಧ್ಯಮವಾಗಿದೆ. ಚಿತ್ರದುರ್ಗದ ನೆಲ ಸಂಗೀತ, ಸಾಹಿತ್ಯ, ಸಂಸ್ಕೃತಿಗೆ ತುಂಬಾ ಹೆಸರುವಾಸಿಯಾದ ನೆಲ. ಸಂಗೀತ, ಸಾಹಿತ್ಯ, ಕಲೆ, ಸಂಸ್ಕತಿಯು ನಮ್ಮ ಬದುಕಿನ ಭಾಗವೂ ಹೌದು’ ಎಂದರು.

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಎಚ್.ದಿವಾಕರ್, ತಾಲ್ಲೂಕು ಅಧಿಕಾರಿ ಎಂ.ಟಿ. ಶಿವರಾಜ್, ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಪಾಲಕಿ ಕೆ.ಎಸ್.ವೈಶಾಲಿ ಇದ್ದರು.

# ರಾಜ್ಯ ಪ್ರಶಸ್ತಿಗೆ ಅರ್ಜಿ

**ಚಿತ್ರದುರ್ಗ:** ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ರಾಜ್ಯ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅಕ್ಟೋಬರ್ 15 ಅರ್ಜಿ ಸಲ್ಲಿಸಲು ಕೊನೆಯ ದಿನ

ವಿಶ್ವ ವಿಕಲಚೇತನರ ದಿನಾಚರಣೆಯನ್ನು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ವತಿಯಿಂದ 2025ರ ಡಿಸೆಂಬರ್ 03 ರಂದು ಬೆಂಗಳೂರಿನಲ್ಲಿ ಆಚರಿಸಲಾಗುತ್ತಿದೆ. ಇದರ ಅಂಗವಾಗಿ ವಿಕಲಚೇತನರ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿದ ಸಂಸ್ಥೆಗಳಿಗೆ, ವಿಶೇಷ ಶಿಕ್ಷಕರಿಗೆ ಮತ್ತು ವೈಯಕ್ತಿಕ ಪ್ರಶಸ್ತಿಗಳನ್ನು ರಾಜ್ಯ ಮಟ್ಟದಲ್ಲಿ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿನ ಸಮಿತಿಯಲ್ಲಿ ಆಯ್ಕೆ ಮಾಡಿ ವಿಶ್ವ ವಿಕಲಚೇತನ ದಿನಾಚರಣೆಯಂದು ಪ್ರದಾನ ಮಾಡಲಾಗುವುದು. ಚಿತ್ರದುರ್ಗ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ವಿಶೇಷ ಶಿಕ್ಷಕರ ವಿಭಾಗ, ವೈಯಕ್ತಿಕ ವಿಭಾಗ, ಮತ್ತು ಸಂಸ್ಥೆಗಳ ವಿಭಾಗದಲ್ಲಿ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿರುತ್ತದೆ. ಜಿಲ್ಲಾ ಕಛೇರಿಯಿಂದ ಅರ್ಜಿ ನಮೂನೆಗಳನ್ನು ಪಡೆದು ದಿನಾಂಕ:15-10-2025 ರೊಳಗಾಗಿ ಪೂರ್ಣ ವಿವರವನ್ನು ಕನ್ನಡದಲ್ಲಿಯೇ ಭರ್ತಿ ಮಾಡಿ, ಭರ್ತಿ ಮಾಡಿದ ಅರ್ಜಿ ನಮೂನೆ ಹಾಗೂ ಪ್ರಸ್ತಾವನೆಯನ್ನು ದ್ವಿ-ಪ್ರತಿಯಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸ್ಟೇಡಿಯಂ ಹತ್ತಿರ, ಬಾಲಭವನ ಆವರಣ, ಚಿತ್ರದುರ್ಗ ಈ ಕಛೇರಿಗೆ ಸಲ್ಲಿಸುವುದು. ತಡವಾಗಿ ಬಂದಂತಹ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸ್ಟೇಡಿಯಂ ಹತ್ತಿರ, ಬಾಲಭವನ ಆವರಣ, ಚಿತ್ರದುರ್ಗ ಕಛೇರಿ ದೂರವಾಣಿ ಸಂ: 08194-235284 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ.ವೈಶಾಲಿ ತಿಳಿಸಿದ್ದಾರೆ.

# ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಬೇಡಿ

## ಕಬ್ಬಳ ಗ್ರಾಮದಲ್ಲಿ ಕ್ರಷರ್ ನಡೆದರೆ ರೈತರಿಗೆ ತೊಂದರೆ; ಜಿಲ್ಲಾಧಿಕಾರಿಗೆ ಮನವಿ

**ಹೊಸದುರ್ಗ:** ತಾಲ್ಲೂಕಿನ ಕಬ್ಬಳ ಗ್ರಾಮದ ಸರ್ವೆ ನಂಬರ್ 19ರಲ್ಲಿ ಯಾವುದೇ ಕಾರಣಕ್ಕೂ ಕಲ್ಲು ಗಣಿಗಾರಿಕೆ ಮಾಡಲು ಅವಕಾಶ ನೀಡಬಾರದು ಎಂದು- ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಗ್ರಾಮಸ್ಥರು ಒತ್ತಾಯಿಸಿದರು.

ಖಾಸಗಿ ಕ್ರಷರ್ ಮಾಲೀಕರ ಕ್ರಷರ್‌ನಲ್ಲಿ ವಾರ್ಷಿಕ 2,50,000 ಟನ್ ಉತ್ಪಾದನಾ ಸಾಮರ್ಥ್ಯದ ಕಟ್ಟಡ ಕಲ್ಲು (ಎಂ ಸ್ಯಾಂಡ್) ಹಾಗೂ 5,102 ಟನ್ ಅಂತರಸ್ಥಿತ ತ್ಯಾಜ್ಯ, 38,090 ಟನ್ ಮುರಂ ಗಣಿಗಾರಿಕೆ ಮಾಡುವ ಯೋಜನೆಗೆ ಅನುಮತಿ ನೀಡಬಾರದು ಎಂದು ಒತ್ತಾಯಿಸಿದರು.

ರೈತರ ಜಮೀನುಗಳಿಗೆ ಹೊಂದಿಕೊಂಡಿರುವ ಜಾಗದಲ್ಲಿ ಕಲ್ಲುಗಣಿಗಾರಿಕೆ ಆರಂಭಿಸಲು ಅನುಮತಿ ನೀಡಿದರೆ ರೈತರು ಸರಣಿಯಾಗಿ ತಾಲ್ಲೂಕು ಕಚೇರಿಯ ಮುಂದೆ ನೇಣುಬಿಗಿದುಕೊಂಡು ಸಾಯುತ್ತೇವೆ. ಈ ಜಾಗದಲ್ಲಿ ಯಾವುದೇ ಕಾರಣಕ್ಕೂ ಕಲ್ಲುಗಣಿಗಾರಿಕೆ ಆರಂಭಿಸಲು ಬಿಡುವುದಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಉದ್ದೇಶಿತ ಗಣಿಗಾರಿಕೆ ಸ್ಥಳದಿಂದ ಕೇವಲ 500 ಮೀ. ದೂರದಲ್ಲಿ ಇತಿಹಾಸ ಪ್ರಸಿದ್ಧ ರಂಗನಾಥಸ್ವಾಮಿ ದೇಗುಲವಿದೆ. ಈ ಪ್ರದೇಶದಲ್ಲಿ ನೂರಾರು ಕೃಷ್ಣಮೃಗಗಳು, ನವಿಲುಗಳು ಸೇರಿದಂತೆ ಇತರೆ ಪ್ರಾಣಿಗಳು ವಾಸವಾಗಿವೆ. ಈ ಸ್ಥಳಕ್ಕೆ ಹೊಂದಿಕೊಂಡಂತೆ ನೂರಾರು ರೈತರ ಜಮೀನು, ತೋಟಗಳಿದ್ದು, ಗಣಿಗಾರಿಕೆಯಿಂದ ಬರುವ ದೂಳಿನಿಂದ ಬೆಳೆಗಳು ಹಾಳಾಗುತ್ತವೆ’ ಎಂದರು.

ಉದ್ದೇಶಿತ ಗಣಿಗಾರಿಕೆ ಸ್ಥಳದಿಂದ ಕೇವಲ 500 ಮೀ. ದೂರದಲ್ಲಿ ಇತಿಹಾಸ ಪ್ರಸಿದ್ಧ ರಂಗನಾಥಸ್ವಾಮಿ ದೇಗುಲವಿದೆ...

### ಗಣಿ ಧೂಳು...


ಉದ್ದೇಶಿತ ಗಣಿಗಾರಿಕೆ ಸ್ಥಳದಿಂದ ಕೇವಲ 500 ಮೀ. ದೂರದಲ್ಲಿ ಇತಿಹಾಸ ಪ್ರಸಿದ್ಧ ರಂಗನಾಥಸ್ವಾಮಿ ದೇಗುಲವಿದೆ. ಈ ಪ್ರದೇಶದಲ್ಲಿ ನೂರಾರು ಕೃಷ್ಣಮೃಗಗಳು, ನವಿಲುಗಳು ಸೇರಿದಂತೆ ಇತರೆ ಪ್ರಾಣಿಗಳು ವಾಸವಾಗಿವೆ. ಈ ಸ್ಥಳಕ್ಕೆ ಹೊಂದಿಕೊಂಡಂತೆ ನೂರಾರು ರೈತರ ಜಮೀನು, ತೋಟಗಳಿದ್ದು, ಗಣಿಗಾರಿಕೆಯಿಂದ ಬರುವ ದೂಳಿನಿಂದ ಬೆಳೆಗಳು ಹಾಳಾಗುತ್ತವೆ’ ಎಂದರು.




ಹೊಸದುರ್ಗದ ಕಬ್ಬಳ ಗ್ರಾಮದಲ್ಲಿ ಕಲ್ಲುಗಣಿಗಾರಿಕೆ ಆರಂಭಿಸದಂತೆ ಒತ್ತಾಯಿಸಿ ಸಾರ್ವಜನಿಕರು ಜಿಲ್ಲಾಧಿಕಾರಿ ಟಿ.ವೆಂಕಟೇಶ್‌ಗೆ ಮನವಿ ಸಲ್ಲಿಸಿದರು.

“ಇಲ್ಲಿ ಯಾವುದೇ ತೀರ್ಮಾನವನ್ನು ಮಾಡುವುದಿಲ್ಲ. ಸಾರ್ವಜನಿಕರು, ರೈತರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಎಲ್ಲರ ಅಹವಾಲುಗಳನ್ನು ವರದಿ ಮಾಡಿಕೊಳ್ಳಲಾಗಿದೆ. ಅದನ್ನು ಯಥಾವತ್ತಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

■ ಕೆ.ವೆಂಕಟೇಶ್, ಜಿಲ್ಲಾಧಿಕಾರಿಗಳು, ಚಿತ್ರದುರ್ಗ



“ನಾವು 40 ವರ್ಷಗಳಿಂದ ತೋಟ ಮಾಡುತ್ತಿದ್ದೇವೆ. ಇಲ್ಲಿ ಭೂಮಿಯನ್ನು ನಂಬಿಕೊಂಡು ಸುತ್ತಮುತ್ತ 5 ಸಾವಿರ ಜನ ಇದ್ದಾರೆ. ಕಂಪನಿಯವರು ಇವರನ್ನು ಸಾಕುತ್ತಾರೆಯೇ?.

■ ರೇಣುಕಮ್ಮ, ಕಬ್ಬಳ ನಿವಾಸಿ

### ಗಣಿಗಾರಿಕೆಗೆ ಅವಕಾಶ ನೀಡಿದರೆ ಬದುಕು ಬೀದಿಗೆ

30-40 ವರ್ಷಗಳಿಂದ ಜಮೀನಿನಲ್ಲಿನ ಕಲ್ಲುಗಳನ್ನು ತೆಗೆದು, ಹದ ಮಾಡಿ, ಲಕ್ಷಾಂತರ ರೂಪಾಯಿ ಸಾಲ ಮಾಡಿ ಕೊಳವೆ ಬಾವಿ ಕೊರೆಸಿ, ಟಿಸಿ ಇಟ್ಟು ತೆಂಗಿನ ಸಸಿಗಳನ್ನು ನೆಟ್ಟಿದ್ದೇವೆ. ಇದರಿಂದ ನಮ್ಮ ಬದುಕು ಭವಿಷ್ಯದಲ್ಲಿ ಚೆನ್ನಾಗಿರುತ್ತದೆ ಎಂದು ಭಾವಿಸಿದ್ದೇವೆ. ಈಗ ಈ ಜಾಗದಲ್ಲಿ ಕಲ್ಲುಗಣಿಗಾರಿಕೆ ಆರಂಭಿಸಲು ಅವಕಾಶ ನೀಡಿದರೆ ನಮ್ಮೆಲ್ಲರ ಬದುಕು ಬೀದಿಗೆ ಬರುತ್ತದೆ. ಜಿಲ್ಲಾಧಿಕಾರಿಗಳು ಇಲ್ಲಿಯೇ ತಮ್ಮ ತೀರ್ಮಾನವನ್ನು ತಿಳಿಸಬೇಕು’ ಎಂದು ಒತ್ತಾಯಿಸಿದರು.


30-40 ವರ್ಷಗಳಿಂದ ಜಮೀನಿನಲ್ಲಿನ ಕಲ್ಲುಗಳನ್ನು ತೆಗೆದು, ಹದ ಮಾಡಿ, ಲಕ್ಷಾಂತರ ರೂಪಾಯಿ ಸಾಲ ಮಾಡಿ ಕೊಳವೆ ಬಾವಿ ಕೊರೆಸಿ, ಟಿಸಿ ಇಟ್ಟು ತೆಂಗಿನ ಸಸಿಗಳನ್ನು ನೆಟ್ಟಿದ್ದೇವೆ. ಇದರಿಂದ ನಮ್ಮ ಬದುಕು ಭವಿಷ್ಯದಲ್ಲಿ ಚೆನ್ನಾಗಿರುತ್ತದೆ ಎಂದು ಭಾವಿಸಿದ್ದೇವೆ. ಈಗ ಈ ಜಾಗದಲ್ಲಿ ಕಲ್ಲುಗಣಿಗಾರಿಕೆ ಆರಂಭಿಸಲು ಅವಕಾಶ ನೀಡಿದರೆ ನಮ್ಮೆಲ್ಲರ ಬದುಕು ಬೀದಿಗೆ ಬರುತ್ತದೆ. ಜಿಲ್ಲಾಧಿಕಾರಿಗಳು ಇಲ್ಲಿಯೇ ತಮ್ಮ ತೀರ್ಮಾನವನ್ನು ತಿಳಿಸಬೇಕು’ ಎಂದು ಒತ್ತಾಯಿಸಿದರು.


ಜಿಲ್ಲಾಧಿಕಾರಿ ಕೆ.ವೆಂಕಟೇಶ್ ಮಾತನಾಡಿ, ‘ಇಲ್ಲಿ ಯಾವುದೇ ತೀರ್ಮಾನವನ್ನು ಮಾಡುವುದಿಲ್ಲ. ಸಾರ್ವಜನಿಕರು, ರೈತರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಎಲ್ಲರ ಅಹವಾಲುಗಳನ್ನು ವರದಿ ಮಾಡಿಕೊಳ್ಳಲಾಗಿದೆ. ಅದನ್ನು ಯಥಾವತ್ತಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಶೀಘ್ರದಲ್ಲಿಯೇ ಸರ್ಕಾರ ಈ ಕುರಿತು ಪ್ರಕಟಣೆ ಹೊರಡಿಸಲಿದೆ’ ಎಂದು ಹೇಳಿದರು.ಹಿರಿಯ ಪರಿಸರ ಅಧಿಕಾರಿ ದಾವಣಗೆರೆ ವಲಯದ ರಮೇಶ್ ಡಿ. ನಾಯಕ್, ತಹಶೀಲ್ದಾರ್ ತಿರುಪತಿ ಪಾಟೀಲ್, ಕಬ್ಬಳ, ಬೊಮ್ಮೇನಹಳ್ಳಿ, ಮಲ್ಲೇನಹಳ್ಳಿ, ಹೊಸಹಟ್ಟಿ, ತುಂಬಿನಕೆರೆ, ತುಂಬಿನಕೆರೆ ಭೋವಿಹಟ್ಟಿ, ತೊಣಚೇನಹಳ್ಳಿ ಗ್ರಾಮಗಳ ನೂರಾರು ರೈತರು ಇದ್ದರು.

# ಕೆ.ಎಂ.ಇ.ಆರ್.ಸಿ ನಿಧಿಯಡಿ ದುರ್ಬಲ ವರ್ಗದವರ ಏಳಿಗೆಗೆ ಯೋಜನೆ ರೂಪಿಸಿ:

## ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಸಂಜಯ್ ಎಸ್ ಬಿಜ್ಜೂರ್ ಸೂಚನೆ

“ಕೆ.ಎಂ.ಇ.ಆರ್.ಸಿ ಮುಖ್ಯ ಉದ್ದೇಶ ಗಣಿಬಾಧಿತ ಪ್ರದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸವುದಾಗಿದೆ. ಈ ಹಿನ್ನಲೆಯಲ್ಲಿ ಯೋಜನೆಗಳ ವರದಿಯನ್ನು ಕಾಲ ಕಾಲಕ್ಕೆ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ. ರಾಜ್ಯ ಅಥವಾ ಕೇಂದ್ರ ಸರ್ಕಾರದ ಅನುದಾನದಲ್ಲಿ ಯೋಜನೆ ರೂಪಿಸುವಂತೆ ಕೆ.ಎಂ.ಇ.ಆರ್.ಸಿ ಅಡಿ ಯೋಜನೆಗಳನ್ನು ರೂಪಿಸಲು ಸಾಧ್ಯವಿಲ್ಲ.

■ ಡಾ.ಸಂಜಯ್ ಎಸ್ ಬಿಜ್ಜೂರ್, ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ವ್ಯವಸ್ಥಾಪಕ ನಿರ್ದೇಶಕ

**ಚಿತ್ರದುರ್ಗ:** ಕೆ.ಎಂ.ಇ.ಆರ್.ಸಿ ನಿಧಿಯಡಿ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ದುರ್ಬಲ ವರ್ಗದವರ ಏಳಿಗೆಗೆ ಒತ್ತು ನೀಡಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವಂತೆ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಸಂಜಯ್ ಎಸ್ ಬಿಜ್ಜೂರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಗಣಿಭಾದಿತ ವಲಯಗಳ ಸಮಗ್ರ ಪರಿಸರ ಯೋಜನೆ (ಸಿ.ಇ.ಪಿ.ಎಂ.ಐ.ಝಡ್) ಅಡಿಯಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿ ಹಾಗೂ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೆ.ಎಂ.ಇ.ಆರ್.ಸಿ ಮುಖ್ಯ ಉದ್ದೇಶ ಗಣಿಬಾಧಿತ ಪ್ರದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸವುದಾಗಿದೆ. ಈ ಹಿನ್ನಲೆಯಲ್ಲಿ ಯೋಜನೆಗಳ ವರದಿಯನ್ನು ಕಾಲ ಕಾಲಕ್ಕೆ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ. ರಾಜ್ಯ ಅಥವಾ ಕೇಂದ್ರ ಸರ್ಕಾರದ ಅನುದಾನದಲ್ಲಿ ಯೋಜನೆ ರೂಪಿಸುವಂತೆ ಕೆ.ಎಂ.ಇ.ಆರ್.ಸಿ ಅಡಿ ಯೋಜನೆಗಳನ್ನು ರೂಪಿಸಲು ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ ಯೋಜನೆ ರೂಪಿಸಬೇಕಾದ ಗಣಿಬಾದಿತ ಪ್ರದೇಶ ವ್ಯಾಪ್ತಿ, ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳು, ಆದ್ಯತಾ ವಲಯಗಳನ್ನು ಸ್ಪಷ್ಟವಾಗಿ ನಮೂದಿಸಿ, ಮಾನದಂಡಗಳನ್ನು ರೂಪಿಸಲಾಗಿದೆ. ಅಧಿಕಾರಿಗಳು ಈ ಮಾನದಂಡಗಳನ್ನು ಆಧರಿಸಿ ವಿಸ್ತೃತ ಯೋಜನಾ ವರದಿಗಳನ್ನು ಸಿದ್ದಪಡಿಸಬೇಕು ಎಂದು ಡಾ.ಸಂಜಯ್ ಎಸ್ ಬಿಜ್ಜೂರ್ ಹೇಳಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಗಣಿಭಾದಿತ ವಲಯಗಳ ಸಮಗ್ರ ಪರಿಸರ ಯೋಜನೆ (ಸಿ.ಇ.ಪಿ.ಎಂ.ಐ.ಝಡ್) ಅಡಿಯಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿ ಹಾಗೂ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರ ಘೋಷಿಸಿದ ಯೋಜನೆಗಳಿಗೆ ಆರಂಭದಲ್ಲಿ ಒಂದನೇ ಮೂರು ಅಂಶದ ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಆದರೆ ಕೆ.ಎಂ.ಇ.ಆರ್.ಸಿ ಅಡಿಯಲ್ಲಿ ಕೈಗೆತ್ತಿಕೊಳ್ಳುವ ಯೋಜನೆಗಳಿಗೆ ಆರಂಭದಲ್ಲಿಯೇ ಕಾಮಗಾರಿಗೆ ತಗಲುವ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಕಾಮಗಾರಿಯ ಪ್ರಗತಿಯಲ್ಲಿ ಯಾವುದೇ ಆರ್ಥಿಕ ತೊಂದರೆ ಎದುರಾಗುವುದಿಲ್ಲ. ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬಹುದು ಎಂದು ಡಾ.ಸಂಜಯ್ ಎಸ್ ಬಿಜ್ಜೂರ್ ತಿಳಿಸಿದರು.

ಜಿಲ್ಲೆಯ ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ, ಮೊಳಕಾಲ್ಮೂರು ತಾಲ್ಲೂಕಿನ ಗಣಿಬಾದಿತ ಪ್ರದೇಶಗಳಲ್ಲಿ ರೂ.3,792.30 ಕೋಟಿ ವೆಚ್ಚದ ಕ್ರಿಯಾ ಯೋಜನೆಗಳನ್ನು ರೂಪಿಸಲಾಗಿದೆ. ಪರಿಸರ ಪುನಶ್ಚೇತನ ಅಡಿಯಲ್ಲಿ ಅರಣ್ಯ ಇಲಾಖೆ ರೂ.540.83 ಕೋಟಿ, ಮಾಲಿನ್ಯ ನಿಯಂತ್ರಣ ಮಂಡಳಿ ರೂ.14.81 ಕೋಟಿ, ಕೃಷಿ ಸಂಬಂಧಿಸಿ ಚಟುವಟಿಕೆಗಳಡಿಯಲ್ಲಿ ಕೃಷಿ ಇಲಾಖೆ ರೂ.324.85 ಕೋಟಿ, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ ರೂ.38 ಕೋಟಿ, ರೇಷ್ಮೆ ಇಲಾಖೆ ರೂ.3.5 ಕೋಟಿ, ತೋಟಗಾರಿಕೆ ಇಲಾಖೆ ರೂ.17.06 ಕೋಟಿ, ಮೀನುಗಾರಿಕೆ ರೂ.7.62 ಕೋಟಿ ಯೋಜನೆಗಳನ್ನು ರೂಪಿಸಿವೆ.

ಆರೋಗ್ಯ ಇಲಾಖೆ ಸಮುದಾಯ, ಪ್ರಾಥಮಿಕ ಹಾಗೂ ಉಪ ಆರೋಗ್ಯ ಕೇಂದ್ರಗಳನ್ನು ಬಲಪಡಿಸಲು ರೂ.114 ಕೋಟಿ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ರೂ.114 ಕೋಟಿ ನೂತನ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ.

ಕೆ.ಎಂ.ಇ.ಆರ್.ಸಿ ವತಿಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಗೆ ರೂ.255.94 ಕೋಟಿ, ಪಿಯು ಕಾಲೇಜುಗಳ ಮೂಲ ಸೌಕರ್ಯ ಹಾಗೂ ಕಲಿಕಾ ಸುಧಾರಣೆಗಳ ಬಲವರ್ಧನೆಗಾಗಿ ರೂ.50 ಕೋಟಿ ನೀಡಲಾಗಿದೆ.

ದುರ್ಬಲ ವರ್ಗದವರ ಏಳಿಗೆಗಾಗಿ ಮಹಿಳಾ ಮತ್ತು ಮಕ್ಕಳ ಇಲಾಖೆ 94.03 ಕೋಟಿ, ಸಮಾಜ ಕಲ್ಯಾಣ ಇಲಾಖೆ ರೂ.50 ಕೋಟಿ, ಹಿಂದುಗಳಿದ ವರ್ಗಗಳ ಇಲಾಖೆ ರೂ.25.31 ಕೋಟಿ, ಅಲ್ಪಸಂಖ್ಯಾತರ ಇಲಾಖೆ ರೂ.19.2 ಕೋಟಿ ಯೋಜನೆ ರೂಪಿಸಿವೆ.

ಗ್ರಾಮೀಣ ಭಾಗದಲ್ಲಿನ ಮನೆ ಯೋಜನೆಗಾಗಿ ರೂ.106.89 ಕೋಟಿ, ಪ್ರವಾಸೋದ್ಯಮ ಇಲಾಖೆ 34.5 ಕೋಟಿ, ಸಣ್ಣ ನಿರಾವರಿ ಇಲಾಖೆ ರೂ.154.7 ಕೋಟಿ ಮೀಸಲಿರಿಸಲಾಗಿದೆ. ಭೌತಿಕ ಸೌಕರ್ಯಗಳ ನಿರ್ಮಾಣ ಅಡಿಯಲ್ಲಿ ರೂ.15 ಕೋಟಿ ವೆಚ್ಚದ ಸೈನ್ಸ್ ಪಾರ್ಕ್, 1 ಕೋಟಿ ವೆಚ್ಚದಲ್ಲಿ ಎನ್.ಸಿ.ಸಿ ಬಿಲ್ಡಿಂಗ್, ಸಾರ್ವಜನಿಕ ಗ್ರಂಥಾಲಯಗಳ ಬಲವರ್ಧನೆಗೆ ರೂ.10.29 ಕೋಟಿ, ಸರ್ಕಾರಿ ಮಹಿಳಾ ಪದವಿ ಕಾಲೇಜಿಗೆ ರೂ.25 ಕೋಟಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ರೂ.50 ಕೋಟಿ, ಗಣಿಗಾರಿಕೆ ಇಲಾಖೆ ರೂ.3 ಕೋಟಿ, ಕಂದಾಯ ಇಲಾಖೆ ರೂ.1 ಕೋಟಿ ಯೋಜನೆಗಳನ್ನು ರೂಪಿಸಿವೆ.

ಕೌಶಲ್ಯಾಭಿವೃದ್ಧಿ ಇಲಾಖೆ ರೂ.70.79 ಕೋಟಿ, ಲೋಕೋಪಯೋಗಿ ಇಲಾಖೆ ರೂ.620.22 ಕೋಟಿ ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸಿದ್ದು, ಈಗಾಗಲೇ ಅನುಮೋದನೆ ಪಡೆದು ಆರಂಭಿಸಿದ ಕಾಮಗಾರಿಗಳ ವಿವರವನ್ನು ಪ್ರತಿ ವರ್ಷವೂ ನೀಡಬೇಕು. ಕೆ.ಎಂ.ಇ.ಆರ್.ಸಿ ಅನುಮೋದನೆಯನ್ನು ಪಡೆಯದ ಯೋಜನೆಗಳಿಗೆ ಕೂಡಲೇ ಅನುಮೋದನೆ ಪಡೆಯುವಂತೆ ಡಾ.ಸಂಜಯ್ ಎಸ್ ಬಿಜ್ಜೂರ್ ಹೇಳಿದರು. ಚಳ್ಳಕೆರೆ ಕುದಾಪುರದ ಬಳಿಯ ಭಾರತೀಯ ವಿಜ್ಞಾನ ಕೇಂದ್ರ (ಐಐಎಸ್‌ಸಿ) ಆವರಣದಲ್ಲಿಯೇ ಸೈನ್ಸ್ ಪಾರ್ಕ್ ನಿರ್ಮಾಣ ಮಾಡುವುದರಿಂದ ನಿರ್ವಹಣೆಗೆ ಉತ್ತಮವಾಗುತ್ತದೆ. ಗಣಿ ಬಾಧಿತ ಪ್ರದೇಶದಲ್ಲಿ ಮನೆ ನಿರ್ಮಾಣಕ್ಕೆ ಕೆ.ಎಂ.ಇ.ಆರ್.ಸಿ ವತಿಯಿಂದ ಯೋಜನೆ ರೂಪಿಸಿ, ಟೆಂಡರ್ ಕರೆಯಲಾಗುತ್ತಿದೆ. ಕೂಡಲೇ ಅನುಮೋದಿತ ಫಲಾನುಭವಿಗಳ ಪಟ್ಟಿಯನ್ನು ಕಳುಹಿಸಿಕೊಡಬೇಕು. ಸಮಾಜ ಕಲ್ಯಾಣ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳ ನಿರ್ಮಾಣದ ಯೋಜನೆ ರೂಪಿಸುವ ಮುನ್ನ ಸಾದಕ ಬಾದಕಗಳ ಕುರಿತು ವಿಸ್ತೃತವಾಗಿ ಪರಿಶೀಲನೆ ನಡೆಸಬೇಕು. ತಾಲ್ಲೂಕು ಹಂತದಲ್ಲಿ ಪೌಷ್ಠಿಕ ಆಹಾರ ಸಿದ್ದಪಡಿಸಿ ಶಾಲಾ ಮಕ್ಕಳಿಗೆ ಒದಗಿಸುವ ಕುರಿತು ಇಸ್ಕಾನ್ ಸೇರಿದಂತೆ ಖಾಸಗಿ ಭಾಗಿದಾರರ ಜೊತೆ ಚರ್ಚೆ ನಡೆಸುವಂತೆ ಡಾ.ಸಂಜಯ್ ಎಸ್ ಬಿಜ್ಜೂರ್ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರಿಗೆ ಸೂಚಿಸಿದರು.

# ಹೆದ್ದಾರಿ ಕಾಮಗಾರಿ; ಭೂ ಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಲು ಸೂಚನೆ



ಶಿವಮೊಗ್ಗದಲ್ಲಿ ಸಂಸದ ಬಿ.ವೈ.ರಾಘವೇಂದ್ರ ಜಿಲ್ಲಾಡಳಿತದೊಂದಿಗೆ ಸಭೆ ನಡೆಸಿದರು.

**ಶಿವಮೊಗ್ಗ:** 'ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ಕೈಗೊಳ್ಳಲಾದ ರೈಲ್ವೆ ಮತ್ತು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳ್ಳದಿರುವುದು ಬೇಸರದ ಸಂಗತಿ. ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕೂಡಲೇ ಕಾರ್ಯಪ್ರವೃತ್ತರಾಗಿ ಕಾಮಗಾರಿಗಳ ವೇಗ ಹೆಚ್ಚಿಸಬೇಕು' ಎಂದು ಸಂಸದ ಬಿ.ವೈ.ರಾಘವೇಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಭೂಸ್ವಾಧೀನ, ಅರಣ್ಯ ಸಂಬಂಧಿ ಸಮಸ್ಯೆಗಳು ಹಾಗೂ ರೈಲ್ವೆ ಕಾಮಗಾರಿಗಳ ಪ್ರಗತಿ ಪರಿಶೀಲಿಸಿ ಮಾತನಾಡಿದರು. 'ಕುಂಸಿಯಿಂದ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಭೂಮಿ ಬಿಟ್ಟು ಕೊಡಲು ಮುಂದಾಗಿರುವ ರೈತರೊಂದಿಗೆ ಸಮಾಲೋಚನೆ ನಡೆಸಬೇಕು. ಭೂಸ್ವಾಧೀನ ಮತ್ತು ಭೂಮಿಯ ಪೋಡಿ ಕಾರ್ಯವನ್ನು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಆಗಸ್ಟ್ ಒಳಗಾಗಿ ಪೂರ್ಣಗೊಳಿಸಬೇಕು' ಎಂದು ತಾಕೀತು ಮಾಡಿದರು.

ಸಭೆಯಲ್ಲಿ ವಿಶೇಷವಾಗಿ ಶಿವಮೊಗ್ಗದಿಂದ ಆನಂದಪುರದವರೆಗೆ ರಾಷ್ಟ್ರೀಯ ಹೆದ್ದಾರಿ–69ರಲ್ಲಿ ಚತುಷ್ಪಥ ರಸ್ತೆ, ಹೊಸೂರು ಮತ್ತು ತಾಳಗುಪ್ಪ ಬಳಿ ರೈಲ್ವೆ ಮೇಲ್ಸೇತುವೆ ನಿರ್ಮಾಣ, ಸಾಗರ ಪಟ್ಟಣದಲ್ಲಿ ಚತುಷ್ಪಥ ರಸ್ತೆ, ರಾಷ್ಟ್ರೀಯ ಹೆದ್ದಾರಿ–766ಸಿ ಬೈಂದೂರಿನಿಂದ ನಾಗೋಡಿಯವರೆಗೆ ದ್ವಿಪಥ ರಸ್ತೆ ನಿರ್ಮಾಣ, ಹೊಸನಗರ ಹಾಗೂ ಬೆಕ್ಕೋಡಿ ಬಳಿ 2 ಸೇತುವೆ ಹಾಗೂ ದ್ವಿಪಥ ರಸ್ತೆ ನಿರ್ಮಾಣ ಮತ್ತು ಶಿಕಾರಿಪುರದಲ್ಲಿ ಬೈಪಾಸ್ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿ–169ರ ನೆಲ್ಲಿಸರ ಕ್ಯಾಂಪ್‌ನಿಂದ ತೀರ್ಥಹಳ್ಳಿ ಪಟ್ಟಣದವರೆಗೆ ಚತುಷ್ಪಥ ರಸ್ತೆ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿ–169ಎ ಮೇಗರವಳ್ಳಿಯಿಂದ ಆಗುಂಬೆವರೆಗೆ ದ್ವಿಪಥ ರಸ್ತೆ ನಿರ್ಮಾಣ ಕಾಮಗಾರಿಯ ಪ್ರಗತಿ ಬಗ್ಗೆ ಮಾಹಿತಿ ಪಡೆಯಲಾಯಿತು.

# 'ಇಸ್ರೊ ಪ್ರಗತಿಗೆ ಪ್ರಾಚೀನ ಜ್ಞಾನ ಬುನಾದಿ'

**ಆರ್ಯಭಟ ಗ್ರಹಗಳ ಚಲನೆ, ಅಂತರ, ಭೂಮಿಯ ಸುತ್ತಳತೆಯನ್ನು ಕರಾರುವಕ್ಕಾಗಿ ಗುರುತಿಸಿದ್ದರು. ವರಹಾ, ಮಿಹಿರ, ಬ್ರಹ್ಮಗುಪ್ತ, ಭಾಸ್ಕರ ಸೇರಿದಂತೆ ಅಂದಿನ ಎಲ್ಲ ಬಾಹ್ಯಾಕಾಶ ತಜ್ಞರು ಗಣಿತವನ್ನೂ ಚೆನ್ನಾಗಿ ಅರಿತಿದ್ದರು. ಅವರ ಶೋಧನೆಯ ಜ್ಞಾನವೂ ಇಂದಿಗೂ ಉಪಯುಕ್ತವಾಗುತ್ತಿದೆ' ಎಂದು ಸ್ಮರಿಸಿದರು. ಇಸ್ರೊದ ಚಂದ್ರಯಾನ, ಆದಿತ್ಯ ಮುಂತಾದ ಯೋಜನೆಗಳು ನಮ್ಮ ಜ್ಞಾನ ಪರಂಪರೆಯ ಮುಂದುವರಿದವೇ ಆಗಿವೆ. 2050ರವರೆಗೂ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಭಾರತೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆ, ಗಗನಯಾನ, ಶುಕ್ರ ಹಾಗೂ ಚಂದ್ರನ ಅಧ್ಯಯನ, ಮನುಷ್ಯರನ್ನು ಅಂತರಿಕ್ಷ ಹಾಗೂ ಚಂದ್ರನತ್ತ ಕಳುಹಿಸುವುದು ಒಳಗೊಂಡಿದೆ' ಎಂದು ವಿವರಿಸಿದರು.**



ಮೈಸೂರಿನ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ನಡೆದ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ಚಂದ್ರಯಾನದ ಮಾದರಿಯನ್ನು ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಕ್ತ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ವೀಕ್ಷಿಸಿದರು. ಇಸ್ರೊ?(ಐಎಸ್‌ಟಿಆರ್‌ಎಸಿ) ಸಹಾಯಕ ನಿರ್ದೇಶಕ ಎಂ.ಆರ್.ರಾಘವೇಂದ್ರ ವಿವರಿಸಿದರು.

**ಮೈಸೂರು:** 'ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶಕ್ಕೆ ದೀರ್ಘ ಇತಿಹಾಸವಿದ್ದು, ಆರ್ಯಭಟನ ಜ್ಞಾನ ಪರಂಪರೆಯು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ)ಗೆ ಭದ್ರ ಬುನಾದಿ ನೀಡಿದೆ' ಎಂದು ಇಸ್ರೊ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಸಹಾಯಕ ನಿರ್ದೇಶಕ ಎಂ.ಆರ್.ರಾಘವೇಂದ್ರ ತಿಳಿಸಿದರು.

ನಗರದ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಮುಕ್ತ ವಿಶ್ವವಿದ್ಯಾಲಯದ ಭೌತಶಾಸ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ ಹಾಗೂ ಇಸ್ರೊ (ಐಎಸ್‌ಟಿಆರ್‌ಎಸಿ) ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ 'ಆರ್ಯಭಟನಿಂದ ಗಗನಯಾನದವರೆಗೆ: ಪ್ರಾಚೀನ ಜ್ಞಾನದಿಂದ ಅನಂತ ಸಾಧ್ಯತೆಗಳು' ವಿಷಯ ಕುರಿತು ಮಾತನಾಡಿದರು.

ಆರ್ಯಭಟ ಗ್ರಹಗಳ ಚಲನೆ, ಅಂತರ, ಭೂಮಿಯ ಸುತ್ತಳತೆಯನ್ನು ಕರಾರುವಕ್ಕಾಗಿ ಗುರುತಿಸಿದ್ದರು. ವರಹಾ, ಮಿಹಿರ, ಬ್ರಹ್ಮಗುಪ್ತ, ಭಾಸ್ಕರ ಸೇರಿದಂತೆ ಅಂದಿನ ಎಲ್ಲ ಬಾಹ್ಯಾಕಾಶ ತಜ್ಞರು ಗಣಿತವನ್ನೂ ಚೆನ್ನಾಗಿ ಅರಿತಿದ್ದರು. ಅವರ ಶೋಧನೆಯ ಜ್ಞಾನವೂ ಇಂದಿಗೂ ಉಪಯುಕ್ತವಾಗುತ್ತಿದೆ' ಎಂದು ಸ್ಮರಿಸಿದರು. ಇಸ್ರೊದ ಚಂದ್ರಯಾನ, ಆದಿತ್ಯ ಮುಂತಾದ ಯೋಜನೆಗಳು ನಮ್ಮ ಜ್ಞಾನ ಪರಂಪರೆಯ ಮುಂದುವರಿದವೇ ಆಗಿವೆ. 2050ರವರೆಗೂ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಭಾರತೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆ, ಗಗನಯಾನ, ಶುಕ್ರ ಹಾಗೂ ಚಂದ್ರನ ಅಧ್ಯಯನ, ಮನುಷ್ಯರನ್ನು ಅಂತರಿಕ್ಷ ಹಾಗೂ ಚಂದ್ರನತ್ತ ಕಳುಹಿಸುವುದು ಒಳಗೊಂಡಿದೆ' ಎಂದು ವಿವರಿಸಿದರು. ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, 'ಈ ಕಾರ್ಯಕ್ರಮದ ಮೂಲಕ ವಿಜ್ಞಾನಿಗಳು ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ವಿದ್ಯಾರ್ಥಿಗಳು ಅರಿಯಬೇಕು.ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶ ಸಾಕಷ್ಟು ಮುಂದುವರೆದಿದ್ದು, ಇದರ ಭಾಗವಾಗಲು ಪ್ರಯತ್ನಿಸಬೇಕು' ಎಂದರು.

'ನಮ್ಮ ಅಗತ್ಯತೆಗೆ ಅನುಗುಣವಾಗಿ ಇಂದು ತಂತ್ರಜ್ಞಾನ ಬದಲಾಗುತ್ತಿದೆ. ವಿಜ್ಞಾನದ ಕುರಿತು ಕುತೂಹಲ ಬೆಳೆಸಿಕೊಳ್ಳುವುದು ನಮಗೆ ಜ್ಞಾನ ಹಾಗೂ ಭವಿಷ್ಯದ ಗುರಿ ಸಾಧನೆಗೆ ಸಹಕಾರಿ. ಇಸ್ರೊ ಸಂಸ್ಥೆಯು ಬಾಹ್ಯಾಕಾಶ ತಂತ್ರಜ್ಞಾನವುಳ್ಳ ಮಾದರಿಗಳ ಪ್ರದರ್ಶನ ಆಯೋಜಿಸಿದ್ದು, ವಿದ್ಯಾರ್ಥಿಗಳು ಗಮನಿಸಬೇಕು' ಎಂದು ಕೋರಿದರು. ಮುಕ್ತ ವಿಶ್ವವಿದ್ಯಾಲಯ ಕುಲಪತಿ ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಅಂತರರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ ಮುಖ್ಯ ಸಮಿತಿ ಚೇರ್ಮನ್ ಜಸ್ವಿಂದರ್ ಸಿಂಗ್ ಖೋರಲ್, ಸ್ಥಳೀಯ ಸಮಿತಿ ಚೇರ್ಮನ್ ನಂದಿನಿ ಹರಿನಾಥ್ ಮಾತನಾಡಿದರು.

ಭವನದಲ್ಲಿ ಇಸ್ರೋದಿಂದ ಬಾಹ್ಯಾಕಾಶಕ್ಕೆ ಸಂಬಂಧಿಸಿದ ತಂತ್ರಜ್ಞಾನ ಮಾದರಿಗಳನ್ನು ಪ್ರದರ್ಶನ ಆಯೋಜಿಸಲಾಗಿತ್ತು. ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲ್‌ಎಚ್‌ಡಬ್ಲ್ಯುಸಿ ಪ್ರಧಾನ ವ್ಯವಸ್ಥಾಪಕ ಶಿವಪ್ರಸಾದ್ ಇದ್ದರು.

## ಪ್ರಯಾಣಿಕರ ಹಿತಾಸಕ್ತಿ ಕಡೆಗಣನೆ । ಖಾಸಗಿ ಬಸ್ ಮಾಲೀಕರ ಆಕ್ಷೇಪ

# ಗಡುವು ಮುಗಿದರೂ ಕಾಣದ ಪ್ರಗತಿ

**ಬೆಂಗಳೂರು:** ಟೆಂಡರ್ ಮೊತ್ತದ ನಂತರವೂ ಶೇ 10ರಷ್ಟು ಹೆಚ್ಚು 'ಪ್ರೀಮಿಯಂ ದರ' ನೀಡಲಾಗುತ್ತಿರುವ 'ಉಲ್ಲಾಳು ಮುಖ್ಯರಸ್ತೆ ಗ್ರೇಡ್ ಸೆಪರೇಟರ್' ಕಾಮಗಾರಿ ಮೂರು ವರ್ಷದ ಹಿಂದೆ ಆರಂಭವಾದ ಸ್ಥಿತಿಯಲ್ಲೇ ಇದೆ.

ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆಯನ್ನು ಸಂಪರ್ಕಿಸುವ ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿ ಸುಗಮ ಹಾಗೂ ಸಿಗ್ನಲ್ ಮುಕ್ತ ಸಂಚಾರಕ್ಕಾಗಿ ಉಲ್ಲಾಳು ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲಾಗುತ್ತಿದೆ. ಕಾಮಗಾರಿಯನ್ನು 'ಟರ್ನ್ ಕೀ' ಆಧಾರದಲ್ಲಿ ಗುತ್ತಿಗೆ ನೀಡಿರುವುದರಿಂದ ಎಷ್ಟು ವರ್ಷ ವಿಳಂಬವಾದರೂ ಬಿಬಿಎಂಪಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ. ಆದರೆ ನಾಗರಿಕರಿಗೆ ಮಾತ್ರ ಮೂರು ವರ್ಷಗಳಿಂತ ನಿತ್ಯವೂ ಸಂಕಷ್ಟ, ಕಿರಿಕಿರಿ ತಪ್ಪಿಲ್ಲ.

ಜ್ಞಾನಭಾರತಿಯಿಂದ ಉಲ್ಲಾಳು ಮುಖ್ಯರಸ್ತೆ ಹಾಗೂ ಕೆಂಗೇರಿ, ನಾಗರಬಾವಿ ಕಡೆಗಳಿಗೆ ತಿರುವು ಪಡೆದುಕೊಳ್ಳುವ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲು 28.22 ಕೋಟಿಗೆ ಗುತ್ತಿಗೆ ನೀಡಿ, 2020ರಲ್ಲಿ ಕಾರ್ಯಾದೇಶ ನೀಡಲಾಗಿದೆ. 'ಟೆಂಡರ್ ಪ್ರೀಮಿಯಂ' ವರ್ಗದಲ್ಲಿ ?2.58 ಕೋಟಿಯನ್ನು ಮೂಲ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಿ ನೀಡಲಾಗುತ್ತಿದೆ. ಸರಕು ಮತ್ತು ಸೇವಾ ತೆರಿಗೆಯೂ ಸೇರಿ ಒಟ್ಟಾರೆ ವೆಚ್ಚ 32.84 ಕೋಟಿಯನ್ನು ನಮೂದಿಸಲಾಗಿದೆ. ಗಡುವಿನ ಪ್ರಕಾರ, ಈ ವೇಳೆಗಾಗಲೇ ಕಾಮಗಾರಿ ಮುಗಿದು ಎರಡು ವರ್ಷವಾಗಬೇಕಿತ್ತು. ಆದರೆ, ಕಾಮಗಾರಿ ಆರಂಭವಾದ ದಿನಗಳಲ್ಲಿನ ಸ್ಥಿತಿಯೇ ಮುಂದುವರಿದ್ದು, ಒಂದು ಭಾಗದಲ್ಲಿ ಮಾತ್ರ ತಡೆಗೋಡೆಯನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿದೆ.

ಉಲ್ಲಾಳು ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಯಾವುದೇ ರೀತಿಯ ಭೂಸ್ವಾಧೀನದ ಪ್ರಕ್ರಿಯೆ ನಡೆಸಬೇಕಾಗಿಲ್ಲ. ಆದರೂ ಕಾಮಗಾರಿ ನಾಲ್ಕು ವರ್ಷದಿಂದ ಪ್ರಗತಿ ಕಾಣುತ್ತಿಲ್ಲ. ದಿನವೂ ಈ ಜಂಕ್ಷನ್‌ನಲ್ಲಿನ ವಾಹನ ದಟ್ಟಣೆಯಿಂದ ಜ್ಞಾನಭಾರತಿ ಕ್ಯಾಂಪಸ್, ಉಲ್ಲಾಳು ಮುಖ್ಯರಸ್ತೆ ಹಾಗೂ ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ರಸ್ತೆಗಳು ಕಿರಿದಾಗಿರುವುದರಿಂದ ಪಾದಚಾರಿ ಮಾರ್ಗದಲ್ಲೂ ವಾಹನಗಳೇ ಸಂಚರಿಸುತ್ತಿರುತ್ತವೆ. ಇದರಿಂದ ನಾಗರಿಕರ ಓಡಾಟಕ್ಕೂ ಸಂಕಷ್ಟ ಎದುರಾಗಿದೆ.

ನಾವೇನು ಮಾಡೋದು, ನಮಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಹಣವೇ ಇಲ್ಲದಿದ್ದರೆ ಕೆಲಸ ಹೇಗೆ ಮುಗಿಸೋದು' ಎಂದು ಎರಡೂ ಗ್ರೇಡ್ ಸೆಪರೇಟರ್‌ಗಳ ಕಾಮಗಾರಿಯ ನೇತೃತ್ವ ವಹಿಸಿಕೊಂಡವರು ಸಬೂಬು ಹೇಳುತ್ತಾರೆ ಎಂದು ಸ್ಥಳೀಯರು ದೂರುತ್ತಾರೆ.

**ವಿವಿ ಆವರಣದಲ್ಲೂ ದಟ್ಟಣೆ:** ಉಲ್ಲಾಳು ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ ಮೂರು ವರ್ಷಗಳಿಗೂ ಹೆಚ್ಚು ಕಾಲದಿಂದ ನಡೆಯುತ್ತಿದ್ದು, ನಿತ್ಯವೂ ಇಲ್ಲಿ ಓಡಾಡಲು ಸಮಸ್ಯೆಯಾಗುತ್ತಿದೆ. ಉಲ್ಲಾಳು, ವಿಶ್ವೇಶ್ವರಯ್ಯ ಬಡಾವಣೆ, ಜ್ಞಾನಭಾರತಿ ಬಡಾವಣೆ, ಮಲ್ಲತ್ತಹಳ್ಳಿ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ತರಗತಿಗಳಿಗೆ ಸರಿಯಾದ ಸಮಯಕ್ಕೆ ಹಾಜರಾಗಲು ಆಗುತ್ತಿಲ್ಲ. ವಿಶ್ವವಿದ್ಯಾಲಯದ ಆವರಣದಲ್ಲೂ ವಾಹನ ದಟ್ಟಣೆ ಉಂಟಾಗುತ್ತಿದೆ' ಎಂದು ಮಲ್ಲತ್ತಹಳ್ಳಿ ವಿದ್ಯಾರ್ಥಿ ಜಗದೀಶ್ ಹೇಳಿದರು.

**ದಟ್ಟಣೆಯಿಂದ ಸಮಯ ವ್ಯಯ:** ಗ್ರೇಡ್ ಸೆಪರೇಟರ್ ಕಾಮಗಾರಿಯಿಂದ ವಿ.ವಿ ಒಳಗಿನ ರಸ್ತೆ ಮೂಲಕ ಕೆಂಗೇರಿ ವರ್ತುಲ ರಸ್ತೆಗೆ ಸಂಚರಿಸುತ್ತಿದ್ದೇವೆ. ನೂರಾರು ವಾಹನಗಳೂ ಇದೇ ಮಾರ್ಗದಲ್ಲಿ ಬರುತ್ತಿರುವುದರಿಂದ ಇಲ್ಲೂ ದಟ್ಟಣೆ ಉಂಟಾಗುತ್ತಿದೆ. ನಾಗದೇವನಹಳ್ಳಿ, ದೊಡ್ಡಬಸ್ತಿ ಕಡೆಗೆ ಹೋಗುವವರಿಗೆ ನಿತ್ಯವೂ ಗಂಟೆಗಟ್ಟಲೆ ಈ ಮಾರ್ಗದಲ್ಲೇ ಸಮಯ ವ್ಯಯವಾಗುತ್ತಿದೆ' ಎಂದು ದೊಡ್ಡಬಸ್ತಿ ನಿವಾಸಿ ಕುಮಾರ ಅವರು ರಸ್ತೆ ಅವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಗ್ರೇಡ್ ಸೆಪರೇಟರ್ ಎಂದು ಹೇಳುತ್ತಿದ್ದಾರೆ. ಮೂರು ವರ್ಷದಿಂದ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ಗ್ರೇಡ್ ಸೆಪರೇಟರ್ ಆಗಿದ್ದರೆ ಜಂಕ್ಷನ್ ಅಗೆಯಬೇಕಿತ್ತು. ಮೇಲ್ಸೇತುವೆಯಾಗಿದ್ದರೆ ಪಿಲ್ಲರ್‌ಗಳನ್ನಾದರೂ ನಿರ್ಮಿಸಬೇಕಿತ್ತು. ಆದರೆ, ಉಲ್ಲಾಳು ಮುಖ್ಯರಸ್ತೆ ಅಥವಾ ಹೊರ ವರ್ತುಲ ರಸ್ತೆಯಲ್ಲಿ ಇದರ ಯಾವುದೇ ಕುರುಹು ಇಲ್ಲ. ರಸ್ತೆಯ ಒಂದು ಭಾಗದಲ್ಲಿ ವಿಶ್ವವಿದ್ಯಾಲಯದ ಗೋಡೆ ತೆಗೆದು ತಡೆಗೋಡೆ ನಿರ್ಮಿಸಿರುವುದು ಬಿಟ್ಟರೆ ಯಾವ ಕೆಲಸವೂ ಆಗಿಲ್ಲ. ಅಲ್ಲೂ ಗಿಡಗಳು ಬೆಳೆದು ಮರಗಳಾಗಿವೆ.

ಕೆಲಸ ಮಾಡಲು ಸಾಧ್ಯವಾಗದಿದ್ದರೆ, ಕೆಲಸ ಮಾಡುವವರಿಗೆ ಹಣ ನೀಡಲು ಆಗದಿದ್ದರೆ ಕಾಮಗಾರಿ ಏಕೆ ಆರಂಭಿಸಬೇಕು? ಬಿಬಿಎಂಪಿ ಯಾರದೋ ಒತ್ತಾಸೆಗೆ ಬಿದ್ದು ಕಾಮಗಾರಿ ಆರಂಭಿಸಿದಂತಿದೆ. ಜನರಿಗೆ ತೊಂದರೆ ಕೊಡಲೆಂದೇ ಇದೆಲ್ಲ ಮಾಡುತ್ತಿದ್ದಾರೆ' ಎಂದು ಉಲ್ಲಾಳು ಮುಖ್ಯರಸ್ತೆ ಜಂಕ್ಷನ್ ವ್ಯಾಪಾರಿಗಳಾದ ನಾಗೇಂದ್ರಪ್ಪ, ರಮೇಶ್, ನಟರಾಜ್, ಗೌರಮ್ಮ, ರಾಜೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

**ಶೀಘ್ರ ಕೆಲಸ ಆರಂಭ: ಪ್ರಹ್ಲಾದ್;** ಉಲ್ಲಾಳು ಮುಖ್ಯರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿ ಹಲವಾರು ಕಾರಣದಿಂದ ಮುಂದಕ್ಕೆ ಹೋಗುತ್ತಿದೆ.

ದೇವಸ್ಥಾನವನ್ನು ಬೇರಡೆಗೆ ಸ್ಥಳಾಂತರಿಸಿದೆವು. ಇನ್ನು ಕೆಲವು ದಿನಗಳಲ್ಲಿ ಕೆಲಸ ಆರಂಭಿಸುತ್ತೇವೆ' ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಕೂಡ ಆಗಿರುವ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.



ಮುಖ್ಯರಸ್ತೆ ಜಂಕ್ಷನ್‌ನ ಗ್ರೇಡ್ ಸೆಪರೇಟರ್ ಕಾಮಗಾರಿ ನಡೆಯಬೇಕಿರುವ ಸ್ಥಳದಲ್ಲಿ ರಸ್ತೆ ಅಗೆದಿರುವುದರಿಂದ ನಿತ್ಯ ವಾಹನ ದಟ್ಟಣೆ ಉಂಟಾಗುತ್ತಿದೆ.

**ಕಾಮಗಾರಿ ಏಕೆ ಆರಂಭಿಸಬೇಕಿತ್ತು?**

ಗ್ರೇಡ್ ಸೆಪರೇಟರ್ ಎಂದು ಹೇಳುತ್ತಿದ್ದಾರೆ. ಮೂರು ವರ್ಷದಿಂದ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ಗ್ರೇಡ್ ಸೆಪರೇಟರ್ ಆಗಿದ್ದರೆ ಜಂಕ್ಷನ್ ಅಗೆಯಬೇಕಿತ್ತು. ಆದರೆ, ಉಲ್ಲಾಳು ಮುಖ್ಯರಸ್ತೆ ಅಥವಾ ಹೊರ ವರ್ತುಲ ರಸ್ತೆಯಲ್ಲಿ ಇದರ ಯಾವುದೇ ಕುರುಹು ಇಲ್ಲ. ರಸ್ತೆಯ ಒಂದು ಭಾಗದಲ್ಲಿ ವಿಶ್ವವಿದ್ಯಾಲಯದ ಗೋಡೆ ತೆಗೆದು ತಡೆಗೋಡೆ ನಿರ್ಮಿಸಿರುವುದು ಬಿಟ್ಟರೆ ಯಾವ ಕೆಲಸವೂ ಆಗಿಲ್ಲ. ಅಲ್ಲೂ ಗಿಡಗಳು ಬೆಳೆದು ಮರಗಳಾಗಿವೆ. ಕೆಲಸ ಮಾಡಲು ಸಾಧ್ಯವಾಗದಿದ್ದರೆ, ಕೆಲಸ ಮಾಡುವವರಿಗೆ ಹಣ ನೀಡಲು ಆಗದಿದ್ದರೆ ಕಾಮಗಾರಿ ಏಕೆ ಆರಂಭಿಸಬೇಕು? ಬಿಬಿಎಂಪಿ ಯಾರದೋ ಒತ್ತಾಸೆಗೆ ಬಿದ್ದು ಕಾಮಗಾರಿ ಆರಂಭಿಸಿದಂತಿದೆ. ಜನರಿಗೆ ತೊಂದರೆ ಕೊಡಲೆಂದೇ ಇದೆಲ್ಲ ಮಾಡುತ್ತಿದ್ದಾರೆ' ಎಂದು ಉಲ್ಲಾಳು ಮುಖ್ಯರಸ್ತೆ ಜಂಕ್ಷನ್ ವ್ಯಾಪಾರಿಗಳಾದ ನಾಗೇಂದ್ರಪ್ಪ, ರಮೇಶ್, ನಟರಾಜ್, ಗೌರಮ್ಮ ವ್ಯಕ್ತಪಡಿಸಿದರು.

# ಪ್ರೀತಿ–ಸ್ಮೃತಿ ಮತ್ತು ಸ್ಮಾರಕ!

**ಡಾ.ಕೆ.ಎಸ್.ಪವಿತ್ರ/** ಪ್ರೀತಿಯಲ್ಲಿ ಮುಳುಗಿರುವಾಗ ಬೀಸುತ್ತಿರುವ ಗಾಳಿಯಲ್ಲೆಲ್ಲ ಪ್ರೀತಿ ತುಂಬಿರುವಂತೆ ಭಾಸವಾಗುತ್ತದೆಯಷ್ಟೆ. ಅದಕ್ಕಾಗಿಯೇ **`Love is in the air'** ಅನ್ನುವುದಿರಬೇಕು! ಪ್ರೀತಿಗಾಗಿ ನಾವು ಏನು ಮಾಡಲು ಸಾಧ್ಯವಿದೆ?! ಏನನ್ನು ಬೇಕಾದರೂ ಎಂದು ಈಗಷ್ಟೇ ಪ್ರೀತಿಯಲ್ಲಿ 'ಬಿದ್ದ'ವರೆನ್ನಬಹುದು. ರಕ್ತದಲ್ಲಿ ಪ್ರೇಮಪತ್ರ ಬರೆದವರೂ ಇರಬಹುದು. ಅಥವಾ ಪ್ರೀತಿಯ ಪ್ರಥಮ ಅಲೆಯಲ್ಲಿ ಮುಳುಗೆದ್ದವರು, ಮೊದಲ ಉದ್ವೇಗ ಕಳೆದವರು ವರ್ಷಕ್ಕೊಮ್ಮೆ ಹುಟ್ಟಿದ ಹಬ್ಬಕ್ಕೋ ಅಥವಾ ಅಪರೂಪಕ್ಕೊಮ್ಮೆ 'ವ್ಯಾಲೆಂಟೈನ್ಸ್ ಡೇ'ಗೋ ಒಂದು ಹೂ /ಬಟ್ಟೆ/ ಗ್ರೀಟಿಂಗ್ ಕಾರ್ಡ್ ಇತ್ಯಾದಿ ಕೊಡುತ್ತೇವೆ – ಅಲ್ಲಿಗೆ ಪ್ರೀತಿಯ ಕಥೆ ಮುಗಿಸುತ್ತೇವೆ ಎನ್ನಬಹುದು. ಪ್ರೀತಿಗೆಂದು, ತಮಗಿರುವ ಪ್ರೀತಿಯ ಆಳ ಇತರರಿಗೂ ಗೊತ್ತಾಗಲಿ/ ಮಾದರಿಯಾಗಲಿ ಅಥವಾ ಅಮರವಾಗಿ ನಿಲ್ಲಲಿ ಎಂಬ ಕಾರಣದಿಂದ 'ಪ್ರೇಮಸೌಧ'ವನ್ನೇ ನಿರ್ಮಿಸುವವರೂ ಇರಬಹುದು.

ಹೀಗೆ ಆರಂಭಿಸಿದ ತಕ್ಷಣ 'ತಾಜ್‌ಮಹಲ್' ಬಗೆಗೇ ನಾನು ಮಾತನಾಡುತ್ತಿರಬೇಕೆಂದು ಭಾವಿಸಿ ಬಿಡಬೇಡಿ! ತಾಜ್ ಮಹಲ್‌ನಂತಹ ಪ್ರೀತಿಯ ಸ್ಮೃತಿಗಳು, ಸ್ಮೃತಿಯಿಂದ ಕಟ್ಟಿದ ಸ್ಮಾರಕಗಳು ಜಗತ್ತಿನ ಹಲವೆಡೆಗಳಲ್ಲಿವೆ. ಜಗತ್ತಿನ ಹಲವೆಡೆ ಓಡಾಡುತ್ತ, ಮ್ಯೂಸಿಯಂ–ಸ್ಮಾರಕಗಳನ್ನು ನೋಡುವ ಚಟವಿರುವ ನನಗೆ, 'ಪ್ರೇಮ–ಸ್ಮಾರಕ'ಗಳನ್ನು ಗಮನಿಸುವ ಕುತೂಹಲದ ಕೆಲಸಕ್ಕೆ ಈ ಬಾರಿಯ 'ಪ್ರೇಮಿಗಳ ದಿನ' ಸೂಕ್ತ ಎನಿಸಿಬಿಟ್ಟಿತು. ತಾಜ್‌ಮಹಲನ್ನು ಬಹು ಹಿಂದೆ ನೋಡಿದ್ದರೂ, ಷಹಜಹಾನನ ಅಮರ ಪ್ರೇಮದ ಕಥೆಯನ್ನು ಮತ್ತೆ ಮತ್ತೆ ಕೇಳಿದ್ದರೂ, ಪ್ರೀತಿ ಸ್ಮಾರಕದ ಬಗ್ಗೆ ನಾನು ಅಷ್ಟಾಗಿ ಯೋಚಿಸಿಯೇ ಇರಲಿಲ್ಲ. ಏಕೆಂದರೆ ಅದೇಕೋ ತಾಜ್‌ಮಹಲ್ ಕಥೆ ಕೇಳಿದಾಗಲೆಲ್ಲ ಪ್ರೀತಿಗಿಂತ ಸಾವು–ನೋವು–ಸಮಾಧಿಗಳೂ ಪ್ರೀತಿಯ ಭಾಗವಾಗಿಯೇ ಎದ್ದು ನಿಂತು ಬಿಡುತ್ತಿದ್ದವು. ಪ್ರೇಮದ ಜೊತೆ ಆಕರ್ಷಣೆ–ಕಲಾತ್ಮಕತೆಗಳನ್ನು ಸೆಳೆಯುವಂತಹ ಒಂದು ತಾಣ ನನಗೆ ಮೊದಲು ಸಿಕ್ಕಿದ್ದು ಜಪಾನಿನ ಕ್ಯೋಟೋ ಎಂಬ ಗೇಷ್ಯಾನಗರಿಯಲ್ಲಿ. ಇಲ್ಲಿರುವ ಒಂದು ಪ್ರಮುಖ ದೇವಾಲಯ ಕೊಡೈಜಿ ದೇವಾಲಯ. ಅಲ್ಲಿಯ ಸೌಂದರ್ಯ–ಪ್ರಕೃತಿ–ಹೂವುಗಳಿಗಿಂತ ಅದು ನನ್ನ ಗಮನ ಸೆಳೆದದ್ದು, ಒಬ್ಬ ಮಹಿಳೆ–ನೆನೆ ಎಂಬಾಕೆ ತನ್ನ ಪತಿ ಟೊಯೋಟೋಮಿ ಹಿಡೆಯೋಶಿಯ ನೆನಪಿಗಾಗಿ ಇದನ್ನು ನಿರ್ಮಿಸಿದಳು ಎಂಬುದು. ಟೀ ಮನೆಗಳು, ಬೊಂಬಿನಿಂದ ಮಾಡಿದ ಸಮಾಧಿ, ಜಪಾನೀ ಶೈಲಿಯ ಉದ್ಯಾನಗಳು ಇಲ್ಲಿವೆ.

ಮಾನ್ಯ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ ಹಿರಿಯೂರು
ಸಿ.ಆರ್.ಮಿಸ್.ಸಂಖ್ಯೆ: 456/2025

ಅರ್ಜಿದಾರರು: 01] ಕೆ. ಎಸ್. ರಾಜಣ್ಣ ಬಿನ್ ಲೇಟ್ ಹೆಚ್. ಶಿವಪ್ಪ, ವಯಸ್ಸು ಸುಮಾರು 46 ವರ್ಷ, 02] ಕೆ. ಎಸ್. ಸಾವಿತ್ರಮ್ಮ ಬಿನ್ ಲೇಟ್ ಶಿವಪ್ಪ, ವಯಸ್ಸು ಸುಮಾರು 43 ವರ್ಷ, 03] ಕೃಷ್ಣಮೂರ್ತಿ ಬಿನ್ ಲೇಟ್ ರಂಗನಾಥಪ್ಪ, ವಯಸ್ಸು ಸುಮಾರು 50 ವರ್ಷ, 04] ಹೆಚ್. ಹಾಲಪ್ಪ ಬಿನ್ ಲೇಟ್ ಹಾಲಪ್ಪ, ವಯಸ್ಸು ಸುಮಾರು 70 ವರ್ಷ, 05] ಹನುಮಕ್ಕ ಕೋಂ ಲೇಟ್ ರಂಗನಾಥಪ್ಪ, ವಯಸ್ಸು ಸುಮಾರು 69 ವರ್ಷ, ಎಲ್ಲರೂ ವಾಸ: ಇ–ಕುರುಬರಹಳ್ಳಿ ಗ್ರಾಮ, ಧರ್ಮಪುರ ಹೋಬಳಿ, ಹಿರಿಯೂರು ತಾಲ್ಲೂಕು.

ವಿರುದ್ಧ

ಎದುರುದಾರರು: ತಹಶೀಲ್ದಾರ್, ಹಿರಿಯೂರು ತಾಲ್ಲೂಕು, ಹಿರಿಯೂರು

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ 1 ರಿಂದ 3ನೇ ಅರ್ಜಿದಾರರ ಮುತ್ತಾತ, 4ನೇ ಅರ್ಜಿದಾರರ ತಾತ ಮತ್ತು 5ನೇ ಅರ್ಜಿದಾರರ ಮಾವನವರಾದ ರಂಗಣ್ಣ ಬಿನ್ ಹಾಲಪ್ಪ ಇವರು ದಿನಾಂಕ 25–05–1960 ರಂದು ಹಿರಿಯೂರು ತಾಲ್ಲೂಕು, ಧರ್ಮಪುರ ಹೋಬಳಿ, ಇ–ಕುರುಬರಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಮೃತರ ಹೆಸರಿನಲ್ಲಿರುವ ಇರುವ ಆಸ್ತಿಯ ಖಾತೆಯನ್ನು ಪೌತಿವಾರಸು ಮೇರೆಗೆ ಖಾತೆ ಬದಲಾವಣೆ ಮಾಡಿಸುವ ಸಲುವಾಗಿ ಘನ ನ್ಯಾಯಾಲಯದ ಮೂಲಕ ಮೃತರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈ ಅರ್ಜಿಯಲ್ಲಿ ತಿಳಿಸಿರುವ ಅರ್ಜಿದಾರರನ್ನು ಬಿಟ್ಟು ಬೇರೆ ವಾರಸುದಾರರು ಯಾರಾದರೂ ತಕರಾರು ಸಲ್ಲಿಸುವವರಿದ್ದರೆ ನ್ಯಾಯಾಲಯದಲ್ಲಿ ಮುದ್ದತ್ತು ದಿನಾಂಕ: 11–9–25 ರಂದು ಬೆಳಿಗ್ಗೆ 11 ಗಂಟೆಗೆ ಈ ಕೇಸಿನಲ್ಲಿ ಖುದ್ದಾಗಿ ಆಗಲಿ ಅಥವಾ ತಮ್ಮ ವಕೀಲರ ಮುಖಾಂತರ ವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯರಿ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ ದಿನಾಂಕ 26–7–25 ರಂದು ನೀಡಲಾಗಿದೆ.

( ಎಂ. ವಿಶ್ವನಾಥ )
ಅರ್ಜಿದಾರರ ಪರ ವಕೀಲರು
ಹಿರಿಯೂರು
ದಿನಾಂಕ: 26/7/25

ಶಿರಸ್ತೇದಾರರು
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಿರಿಯೂರು

ಮಾನ್ಯ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ ಹಿರಿಯೂರು
ಸಿ.ಆರ್.ಮಿಸ್.ಸಂಖ್ಯೆ: 457/2025

ಅರ್ಜಿದಾರರು: 01] ಕೆ. ಎಸ್. ರಾಜಣ್ಣ ಬಿನ್ ಲೇಟ್ ಹೆಚ್. ಶಿವಪ್ಪ, ವಯಸ್ಸು ಸುಮಾರು 46 ವರ್ಷ, 02] ಕೆ. ಎಸ್. ಸಾವಿತ್ರಮ್ಮ ಬಿನ್ ಲೇಟ್ ಶಿವಪ್ಪ, ವಯಸ್ಸು ಸುಮಾರು 43 ವರ್ಷ, 03] ಕೃಷ್ಣಮೂರ್ತಿ ಬಿನ್ ಲೇಟ್ ರಂಗನಾಥಪ್ಪ, ವಯಸ್ಸು ಸುಮಾರು 50 ವರ್ಷ, 04] ಹೆಚ್. ಹಾಲಪ್ಪ ಬಿನ್ ಲೇಟ್ ಹಾಲಪ್ಪ, ವಯಸ್ಸು ಸುಮಾರು 70 ವರ್ಷ, 05] ಹನುಮಕ್ಕ ಕೋಂ ಲೇಟ್ ರಂಗನಾಥಪ್ಪ, ವಯಸ್ಸು ಸುಮಾರು 69 ವರ್ಷ, ಎಲ್ಲರೂ ವಾಸ: ಇ–ಕುರುಬರಹಳ್ಳಿ ಗ್ರಾಮ, ಧರ್ಮಪುರ ಹೋಬಳಿ, ಹಿರಿಯೂರು ತಾಲ್ಲೂಕು.

ವಿರುದ್ಧ

ಎದುರುದಾರರು: ತಹಶೀಲ್ದಾರ್, ಹಿರಿಯೂರು ತಾಲ್ಲೂಕು, ಹಿರಿಯೂರು

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ 1 ರಿಂದ 3ನೇ ಅರ್ಜಿದಾರರ ಮುತ್ತಜ್ಜಿ, 4ನೇ ಅರ್ಜಿದಾರರ ಅಜ್ಜಿ ಮತ್ತು 5ನೇ ಅರ್ಜಿದಾರರ ಅತ್ತೆಯವರಾದ ಭೀಮಕ್ಕ ಕೋಂ ಲೇಟ್ ರಂಗಣ್ಣ ಇವರು ದಿನಾಂಕ 22–07–1965 ರಂದು ಹಿರಿಯೂರು ತಾಲ್ಲೂಕು, ಧರ್ಮಪುರ ಹೋಬಳಿ, ಇ–ಕುರುಬರಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಮೃತರ ಹೆಸರಿನಲ್ಲಿರುವ ಇರುವ ಆಸ್ತಿಯ ಖಾತೆಯನ್ನು ಪೌತಿವಾರಸು ಮೇರೆಗೆ ಖಾತೆ ಬದಲಾವಣೆ ಮಾಡಿಸುವ ಸಲುವಾಗಿ ಘನ ನ್ಯಾಯಾಲಯದ ಮೂಲಕ ಮೃತರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈ ಅರ್ಜಿಯಲ್ಲಿ ತಿಳಿಸಿರುವ ಅರ್ಜಿದಾರರನ್ನು ಬಿಟ್ಟು ಬೇರೆ ವಾರಸುದಾರರು ಯಾರಾದರೂ ತಕರಾರು ಸಲ್ಲಿಸುವವರಿದ್ದರೆ ನ್ಯಾಯಾಲಯದಲ್ಲಿ ಮುದ್ದತ್ತು ದಿನಾಂಕ: 11–9–25 ರಂದು ಬೆಳಿಗ್ಗೆ 11 ಗಂಟೆಗೆ ಈ ಕೇಸಿನಲ್ಲಿ ಖುದ್ದಾಗಿ ಆಗಲಿ ಅಥವಾ ತಮ್ಮ ವಕೀಲರ ಮುಖಾಂತರ ವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯರಿ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ ದಿನಾಂಕ 26–7–25 ರಂದು ನೀಡಲಾಗಿದೆ.

( ಎಂ. ವಿಶ್ವನಾಥ )
ಅರ್ಜಿದಾರರ ಪರ ವಕೀಲರು
ಹಿರಿಯೂರು
ದಿನಾಂಕ: 26/7/25

ಶಿರಸ್ತೇದಾರರು
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಿರಿಯೂರು

# ಅಪಘಾತ ತಗ್ಗಿಸಲು ಪೊಲೀಸರಿಂದ ಪಾಠ

**ಬೆಂಗಳೂರು:** ಬಿಎಂಟಿಸಿ ಬಸ್‌ಗಳಿಂದ ಸಂಭವಿಸುವ ಅಪಘಾತಗಳನ್ನು ತಗ್ಗಿಸುವ ಉದ್ದೇಶದಿಂದ ನಗರ ಸಂಚಾರ ಪೊಲೀಸ್ ವಿಭಾಗದಿಂದ ಚಾಲಕರು ಹಾಗೂ ನಿರ್ವಾಹಕರಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. 9 ತಿಂಗಳಿನಿಂದ ನೀಡುತ್ತಿರುವ ತರಬೇತಿ ಪರಿಣಾಮ ಅಪಘಾತಗಳ ಸಂಖ್ಯೆಯಲ್ಲಿ ಅಲ್ಪ ಪ್ರಮಾಣದ ಇಳಿಕೆಯಾಗಿದೆ.

ಸಂಚಾರ ಪೊಲೀಸ್ ವಿಭಾಗದ ಅಂಕಿ ಅಂಶಗಳ ಪ್ರಕಾರ, ಮೂರು ವರ್ಷಕ್ಕೆ ಹೋಲಿಕೆ ಮಾಡಿದರೆ, ಪ್ರಸಕ್ತ ವರ್ಷ (ಆಗಸ್ಟ್‌ವರೆಗೆ) ಬಿಎಂಟಿಸಿ ಬಸ್‌ಗಳಿಂದ 19 ಅಪಘಾತಗಳು ಸಂಭವಿಸಿವೆ. ಇದು ಸಾರಿಗೆ ಇಲಾಖೆಗೆ ಸ್ವಲ್ಪ ಸಮಾಧಾನ ಉಂಟುಮಾಡಿದೆ. 12 ಸಾವಿರ ಸಿಬ್ಬಂದಿಗೆ ತರಬೇತಿ ನೀಡುವ ಗುರಿ ಹೊಂದಿದ್ದು, 8 ಸಾವಿರಕ್ಕೂ ಹೆಚ್ಚು ಮಂದಿ ತರಬೇತಿ ನೀಡಲಾಗಿದೆ. ಬಿಎಂಟಿಸಿ ಬಸ್ ಚಾಲಕರು ಮತ್ತು ನಿರ್ವಾಹಕರು ನಿತ್ಯ 12 ತಾಸು ಕೆಲಸ ಮಾಡುತ್ತಾರೆ. ಕೆಲವರು ರಾಮನಗರ, ಮಂಡ್ಯ, ತುಮಕೂರು, ಮೈಸೂರಿನಿಂದಲೂ ಬಂದು ಕರ್ತವ್ಯಕ್ಕೆ ಹಾಜರಾಗುತ್ತಾರೆ. ಸಂಚಾರ ದಟ್ಟಣೆ ಮಧ್ಯೆ ಕೆಲಸ ಮಾಡಿ ಚಾಲಕರು ದೈಹಿಕ ಮತ್ತು ಮಾನಸಿಕವಾಗಿ ದಣಿದಿರುತ್ತಾರೆ. ಜನದಟ್ಟಣೆ ಸ್ಥಳ ಹಾಗೂ ತಿರುವುಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿದ್ದವು. ಇದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಂಚಾರ ಪೊಲೀಸರು ಒಂಬತ್ತು ತಿಂಗಳಿನಿಂದ ನಿತ್ಯ 50 ಮಂದಿಯಂತೆ ತರಬೇತಿ ನೀಡುತ್ತಿದ್ದು, ಸೇವ್ ಲೈಫ್ ಫೌಂಡೇಶನ್ ಸಂಸ್ಥೆ ಸಹ ಈ ಕಾರ್ಯಕ್ಕೆ ಕೈ ಜೋಡಿಸಿದೆ.



ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ ಹಿರಿಯೂರು
ಸಿ.ಆರ್.ಮಿಸ್.ಸಂಖ್ಯೆ: 460/2025

ಅರ್ಜಿದಾರರು: 01] ಜಯಮ್ಮ ಕೋಂ ಹನುಮಂತಪ್ಪ ಬಿನ್ ಸಣಹನುಮಂತಪ್ಪ, ವಯಸ್ಸು ಸುಮಾರು 40 ವರ್ಷ, 02] ಅಂಜಿನಮ್ಮ ಬಿನ್ ಸಣ್ಣಹನುಮಂತಪ್ಪ, ವಯಸ್ಸು ಸುಮಾರು 50 ವರ್ಷ, 03] ನಾಗರಾಜು ಬಿನ್ ಸಣ್ಣಹನುಮಂತಪ್ಪ, ವಯಸ್ಸು ಸುಮಾರು 45 ವರ್ಷ, ಎಲ್ಲರೂ ವಾಸ: ಆದಿವಾಲಭೋವಿ ಕಾಲೋನಿ ಗ್ರಾಮ, ಜವನಗೊಂಡನಹಳ್ಳಿ ಹೋಬಳಿ.. ಹಿರಿಯೂರು ತಾಲ್ಲೂಕು

ವಿರುದ್ಧ

ಎದುರುದಾರರು: ತಹಶೀಲ್ದಾರ್‌ರವರು, ಹಿರಿಯೂರು ತಾಲ್ಲೂಕು, ಹಿರಿಯೂರು.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ 1 ರಿಂದ 3ನೇ ಅರ್ಜಿದಾರರ ತಂದೆಯವರಾದ ಸಣ್ಣ ಹನುಮಂತಪ್ಪ ಬಿನ್ ನಾಗಬೋವಿ ಇವರು ದಿನಾಂಕ 08–07–1997 ರಂದು ಹಿರಿಯೂರು ತಾಲ್ಲೂಕು, ಜೆ. ಜಿ. ಹಳ್ಳಿ ಹೋಬಳಿ, ಆದಿವಾಲಬೋವಿ ಕಾಲೋನಿ ಗ್ರಾಮದಲ್ಲಿರುವ ಅರ್ಜಿದಾರರ ಸ್ವಗೃಹದಲ್ಲಿ ಮರಣ ಹೊಂದಿರುತ್ತಾರೆ. ಮೃತರ ಹೆಸರಿಗೆ ಇರುವ ಆಸ್ತಿಯ ಖಾತೆಯನ್ನು ಪೌತಿವಾರಸು ಮೇರೆಗೆ ಖಾತೆ ಬದಲಾವಣೆ ಮಾಡಿಸುವ ಸಲುವಾಗಿ ಘನ ನ್ಯಾಯಾಲಯದ ಮೂಲಕ ಮೃತರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈ ಅರ್ಜಿಯಲ್ಲಿ ತಿಳಿಸಿರುವ ಅರ್ಜಿದಾರರನ್ನು ಬಿಟ್ಟು ಬೇರೆ ವಾರಸುದಾರರು ಯಾರಾದರೂ ಇದ್ದಲ್ಲಿ ತಕರಾರು ಸಲ್ಲಿಸುವವರಿದ್ದರೆ ನ್ಯಾಯಾಲಯದಲ್ಲಿ ಮುದ್ದತ್ತು ದಿನಾಂಕ 11.9.25 ರಂದು ಬೆಳಿಗ್ಗೆ 11 ಗಂಟೆಗೆ ಈ ಕೇಸಿನಲ್ಲಿ ಖುದ್ದಾಗಿ ಆಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯಿರಿ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ, ದಿನಾಂಕ 26–7–25 ರಂದು ನೀಡಲಾಗಿದೆ.

(ಕೆ. ಹೆಚ್. ಆದಿಮೂರ್ತಿ)
ಅರ್ಜಿದಾರರ ಪರ ವಕೀಲರು
ಹಿರಿಯೂರು
ದಿನಾಂಕ: 26–7–25

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಿರಿಯೂರು

# ‘ಸಾಧುಶೆಟ್ಟಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿ’



**ಕಾಮಾಕ್ಷಿ ಸಮುದಾಯ ಭವನ ಉದ್ಘಾಟನೆ; ಕೆ.ಎಸ್.ಈಶ್ವರಪ್ಪ ಸಲಹೆ**

### ಸಾಧುಶೆಟ್ಟಿ ಎಂದೇ ನಮೂದಿಸಿ:

ಸೆ. 28ರಿಂದ ಜಾತಿ ಸಮೀಕ್ಷೆ ನಡೆಯಲಿದ್ದು, ನಮ್ಮಲ್ಲಿ ಅನೇಕ ಉಪ ಪಂಗಡಗಳಿವೆ. ರಾಜ್ಯದಲ್ಲಿ ನಮ್ಮ ಜನಸಂಖ್ಯೆ ಅತ್ಯಂತ ಕಡಿಮೆ ಇದೆ ಎಂದು ಹಿಂದಿನ ಸಮೀಕ್ಷೆ ತೋರಿಸಿತ್ತು. ಈಗ ನಾವೆಲ್ಲರೂ ಒಂದಾಗಿ ಸಾಧುಶೆಟ್ಟಿ ಎಂದೇ ನಮೂದಿಸಬೇಕು’ ಎಂದು ಸಮಾಜದ ಅಧ್ಯಕ್ಷ ಉಮಾಪತಿ ಸಲಹೆ ನೀಡಿದರು.

**ಶಿವಮೊಗ್ಗ:** ‘ಸಮಾಜದ ಕೆಲಸ ದೇವರ ಕೆಲಸ ಎಂದರಿತು, ಸಮಾಜದ ಅಭಿವೃದ್ಧಿಗೆ ಎಲ್ಲರೂ ಒಟ್ಟಾಗಿ ಶ್ರಮಿಸಬೇಕು’ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಸಲಹೆ ನೀಡಿದರು.

‘24 ಮನೆ ಸಾಧುಶೆಟ್ಟಿ ಮಹಿಳಾ ಜಿಲ್ಲಾ ಸಂಘ’ದಿಂದ ಇಲ್ಲಿನ ಮಿಷನ್ ಕಾಂಪೌಂಡ್ ಸಮೀಪದ ಪಾರ್ಕ್ ಬಳಿ ನಿರ್ಮಿಸಿರುವ ಕಾಮಾಕ್ಷಿ ಸಮುದಾಯ ಭವನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಎಲ್ಲ ರಂಗಗಳಲ್ಲಿಯೂ ಸಾಧುಶೆಟ್ಟಿ ಸಮಾಜ ಅಭಿವೃದ್ಧಿ ಹೊಂದುತ್ತಿದೆ. ಸಮಾಜದ ಯುವಕರು ವಿದ್ಯಾವಂತರಾಗಲು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಅನೇಕರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಆ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ’ ಎಂದು ಹರ್ಷ ವ್ಯಕ್ತಪಡಿಸಿದರು. ಕ್ರೀಡೆ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲೂ ಈ ಸಮಾಜದ ಯುವಕರು ಮುಂದಿದ್ದಾರೆ. ಈ ಸಮಾಜದ ಅಭ್ಯರ್ಥಿಗಳು ಐಎಎಸ್, ಕೆಎಎಸ್ ಪರೀಕ್ಷೆಯಲ್ಲೂ ಉತ್ತಮ ಸಾಧನೆ ಮಾಡುತ್ತಿರುವುದು ಉತ್ತಮ ಬೆಳವಣಿಗೆ’ ಎಂದರು. ಸಾಧುಶೆಟ್ಟಿ ಸಮಾಜದವರು ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಬೇಕು. ನಾವು ಎಷ್ಟೇ ಸ್ಥಿತಿವಂತರಾದರೂ, ಶಿಕ್ಷಣ ಬಹಳ ಮುಖ್ಯ. ಮಹಿಳೆಯರಿಗೆ ಎಲ್ಲ ಕ್ಷೇತ್ರಗಳಲ್ಲೂ ಪಾಲ್ಗೊಳ್ಳಲು ಉತ್ತೇಜನ ನೀಡಬೇಕು’ ಎಂದು ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಜೆ.ಅಶ್ವಿನಿ ಸಲಹೆ ನೀಡಿದರು. ಸಮಾಜದ ಕಾರ್ಯಕ್ರಮಗಳಿಗೆ ರಿಯಾಯಿತಿ ದರದಲ್ಲಿ ಭವನ ಲಭಿಸುವಂತಾಗಬೇಕು. ಇದರಿಂದ, ಕಡುಬಡವರಿಗೆ ಅನುಕೂಲವಾಗುತ್ತದೆ’ ಎಂದು ಸೂಡಾ ಮಾಜಿ ಅಧ್ಯಕ್ಷ ರಾಜು ಹೇಳಿದರು. ಜಿಲ್ಲೆಯಲ್ಲಿ ಸಾಧುಶೆಟ್ಟಿ ಸಮಾಜ ಸದೃಢವಾಗಿದೆ. ಆದ್ದರಿಂದ, ರಾಜಕೀಯ ಕ್ಷೇತ್ರದಲ್ಲಿಯೂ ಸಮಾಜ ಹೆಚ್ಚಾಗಿ ಗುರುತಿಸಿಕೊಳ್ಳಬೇಕು’ ಎಂದು ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕ ನರಸಿಂಹ ಗಂಧದಮನೆ ತಿಳಿಸಿದರು. ಸಂಘದ ಮಹಿಳಾ ಘಟಕದ ಅಧ್ಯಕ್ಷೆ ನಾಗರತ್ನ ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು. ಸಂಸದ ಬಿ.ವೈ. ರಾಘವೇಂದ್ರ, ಶಾಸಕರಾದ ಡಿ.ಎಸ್. ಅರುಣ್, ಡಾ.ಧನಂಜಯ ಸರ್ಜಿ, ಹೊಸಳ್ಳಿ ಗ್ರಾಮ ಪಂಚಾಯಿತಿ ಸದಸ್ಯೆ ಲೀಲಾವತಿ ರಾಮು, ಕೆಪಿಸಿಸಿ ಸಂಯೋಜಕ ಆರ್.ಮೋಹನ್ ಕುಮಾರ್, ಮಂಗೇಶ್ವರ, ಎನ್. ರಮೇಶ್, ಶೋಭಾ ಕೆ.ಆರ್, ಕೇಶವಮೂರ್ತಿ, ಎಸ್.ಎಲ್. ಕೃಷ್ಣಮೂರ್ತಿ, ಡಿ. ಗೋವಿಂದರಾಜ್, ಎಸ್. ಶಿವಾನಂದ್, ಡಿ.ಜಿ. ಕಿರಣ್, ಚೈತ್ರಾ ಮೋಹನ್, ಲೀಲಾವತಿ ರಾಮು, ಬಿ. ರಘು, ಸೋಮಶೇಖರ್ ಇದ್ದರು.

ಸೆ. 28ರಿಂದ ಜಾತಿ ಸಮೀಕ್ಷೆ ನಡೆಯಲಿದ್ದು, ನಮ್ಮಲ್ಲಿ ಅನೇಕ ಉಪ ಪಂಗಡಗಳಿವೆ. ರಾಜ್ಯದಲ್ಲಿ ನಮ್ಮ ಜನಸಂಖ್ಯೆ ಅತ್ಯಂತ ಕಡಿಮೆ ಇದೆ ಎಂದು ಹಿಂದಿನ ಸಮೀಕ್ಷೆ ತೋರಿಸಿತ್ತು. ಈಗ ನಾವೆಲ್ಲರೂ ಒಂದಾಗಿ ಸಾಧುಶೆಟ್ಟಿ ಎಂದೇ ನಮೂದಿಸಬೇಕು’ ಎಂದು ಸಮಾಜದ ಅಧ್ಯಕ್ಷ ಉಮಾಪತಿ ಸಲಹೆ ನೀಡಿದರು.

# 50 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿ



ಜಗಳೂರಿನಲ್ಲಿ 8 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬಿ. ದೇವೇಂದ್ರಪ್ಪ ಚಾಲನೆ ನೀಡಿದರು.

**ಜಗಳೂರು:** ಜಗಳೂರು ಪಟ್ಟಣದ ಅಭಿವೃದ್ಧಿಗೆ 2 ವರ್ಷದಲ್ಲಿ 50 ಕೋಟಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು ರೂ.600 ಕೋಟಿ ಅನುದಾನ ಮಂಜೂರಾಗಿದ್ದು, ಅಭಿವೃದ್ಧಿ ಕಾಮಗಾರಿಗಳು ಭರದಿಂದ ಸಾಗುತ್ತಿವೆ ಎಂದು ಶಾಸಕ ಬಿ.ದೇವೇಂದ್ರಪ್ಪ ಹೇಳಿದರು.

ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಎಸ್.ಎಫ್.ಸಿ. ವಿಶೇಷ ಅನುದಾನ ಯೋಜನೆಯಡಿ ?8 ಕೋಟಿ ವೆಚ್ಚದ ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಪಟ್ಟಣದಲ್ಲಿ ಹಾದುಹೋಗಿರುವ ಮಲ್ಪೆ ?ಮೊಳಕಾಲ್ಮೂರು ರಾಜ್ಯ ಹೆದ್ದಾರಿ ರಸ್ತೆಯನ್ನು ?20 ಕೋಟಿ ವೆಚ್ಚದಲ್ಲಿ ಸುಸಜ್ಜಿತವಾಗಿ ನಿರ್ಮಾಣ ಮಾಡಲಾಗುತ್ತಿದೆ.

8 ಕೋಟಿ ವೆಚ್ಚದಲ್ಲಿ ಸಿ.ಸಿ. ರಸ್ತೆ, ಬಾಕ್ಸ್ ಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ವಿರೋಧ ಪಕ್ಷದವರು ಸುಮ್ಮನೆ ಟೀಕೆ ಮಾಡುವುದು ಸಲ್ಲದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆರೋಗ್ಯಕರ ಟೀಕೆ ಟಿಪ್ಪಣಿ, ಚರ್ಚೆ ನಡೆಸಲಿ. ರಾಜಕೀಯ ದುರುದ್ದೇಶದಿಂದ ಮಾಡುವ ಅನಗತ್ಯ ಟೀಕೆಗಳಿಗೆ ಉತ್ತರಿಸಲು ನನಗೆ ಸಮಯವಿಲ್ಲ ಎಂದು ಶಾಸಕರು ತಿರುಗೇಟು ನೀಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬರಗಾಲ ಬರುತ್ತದೆ ಎಂದು ಹಿಂದೆ ವದಂತಿ ಹಬ್ಬಿಸಿದ್ದ ವಿರೋಧ ಪಕ್ಷಗಳಿಗೆ ಪ್ರಕೃತಿಯೇ ತಕ್ಕ ಉತ್ತರ ನೀಡುತ್ತಿದೆ.

ಎರಡು ವರ್ಷದಿಂದ ಉತ್ತಮ ಮಳೆಯಾಗಿ ಕೆರೆಗಳು ಕೋಡಿ ಬಿದ್ದಿವೆ. ತಾಲ್ಲೂಕಿನಲ್ಲಿ ನೀರಾವರಿ ಪ್ರದೇಶ ಹೆಚ್ಚುತ್ತಿದ್ದು, ಬರಪೀಡಿತ ಹಣೆಪಟ್ಟಿ ಕಳಚಲಿದೆ. ಶೀಘ್ರವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕ್ಷೇತ್ರಕ್ಕೆ ಆಹ್ವಾನಿಸಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಕ್ಷೇತ್ರದಲ್ಲಿ ಅನ್ನ, ಆರೋಗ್ಯ, ಶಿಕ್ಷಣ, ಮೂಲಸೌಕರ್ಯ ಅಭಿವೃದ್ಧಿಯೇ ನಮ್ಮ ಮೂಲಮಂತ್ರ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ. ಕೀರ್ತಿಕುಮಾರ್, ಪಟ್ಟಣ ಪಂಚಾಯಿತಿ ಸದಸ್ಯರಾದ ಮಂಜುನಾಥ್, ಕುರಿಜಯ್ಯಣ್ಣ, ತಾನಾಜಿ ಗೋಸಾಯಿ, ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಪಿಆರ್‌ಇಡಿ ಇಲಾಖೆ ಎಇಇ ಶಿವಮೂರ್ತಿ, ಎಂಜಿನಿಯರ್ ವಿಜಯ್ ಕುಮಾರ್ ನಾಯ್ಕ, ಮುಖಂಡರಾದ ಬಿ.ಮಹೇಶ್ವರಪ್ಪ, ಗೌರಿಪುರ ಶಿವಣ್ಣ, ರಮೇಶ್, ಪಲ್ಲಾಗಟ್ಟೆ ಶೇಖರಪ್ಪ, ಕಾಂತರಾಜ್, ಹರೀಶ್ ಕೆಚ್ಚೇನಹಳ್ಳಿ, ಮಂಜುನಾಥ್, ಸಣ್ಣಸೂರಜ್ಜ, ಮಹಾಂತೇಶ್ ಗಾಣಗಟ್ಟೆ ಇದ್ದರು.

# ನಾವೆಲ್ಲಿ ಹೊಳೆಗೆ ಹಾರುವುದಾ; ಶಾಸಕ ಆರಗ ಪ್ರಶ್ನೆ

**ತೀರ್ಥಹಳ್ಳಿ: ಪರಿಭಾವಿತ ಅರಣ್ಯ ಪ್ರದೇಶಕ್ಕೆ 446 ಜನವಸತಿಗೆ ಆಕ್ಷೇಪ**



ತೀರ್ಥಹಳ್ಳಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಯಿತು.

**ತೀರ್ಥಹಳ್ಳಿ:** ‘ತಾಲ್ಲೂಕಿನಲ್ಲಿ ಕೆಳಕೆರೆ ಗ್ರಾಮದಂತಹ 100ಕ್ಕೂ ಹೆಚ್ಚು ಜನವಸತಿ ಹೊಂದಿರುವ ಪ್ರದೇಶಗಳನ್ನು ಡೀಮ್ಡ್ ಫಾರೆಸ್ಟ್ ವ್ಯಾಪ್ತಿಗೆ ಸೇರಿಸಲಾಗಿದೆ. ತಾಲ್ಲೂಕಿನಲ್ಲಿ ಅಂತಹ 446 ಮಜರೆ ಹಳ್ಳಿಗಳಿವೆ. ಹೀಗೆ ಎಲ್ಲವನ್ನೂ ಅರಣ್ಯ ಪ್ರದೇಶವೆಂದು ಗುರುತಿಸಿದರೆ ನಾವೆಲ್ಲಿ ಹೊಳೆ ಹಾರುವುದಾ?’ ಎಂದು ಶಾಸಕ ಆರಗ ಜ್ಞಾನೇಂದ್ರ ಕೆಂಡಾಮಂಡಲವಾದರು.

‘ಭೂಮಿ ಅನುಭವ ಹೊಂದಿರುವ ರೈತರು, ಬಡವರು ಫಾರಂ ನಂಬರ್ 57ರಲ್ಲಿ ಬಗರ್ ಹುಕುಂ ಅಡಿ ಅರ್ಜಿ ಸಲ್ಲಿಸಿದ್ದಾರೆ. ಅವರ ಅರ್ಜಿ ಯಾವ್ಯಾವುದೋ ಕಾರಣಕ್ಕೆ ವಜಾಗೊಂಡಿದೆ. ಅದರ ಬಗ್ಗೆ ಆಡಳಿತ ಯಾವುದೇ ಮಾಹಿತಿ ನೀಡುತ್ತಿಲ್ಲ. ಅರ್ಜಿದಾರರು ಫಾರಂ 53ರಲ್ಲಿ ಅರ್ಜಿ ಸಲ್ಲಿಸಲು ಕೂಡ ಅವಕಾಶ ನೀಡುತ್ತಿಲ್ಲ. ನಿಮಗೇಕೆ ಜನರ ಕಷ್ಟ ಅರ್ಥವಾಗುವುದಿಲ್ಲ’ ಎಂದು ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಉಪ ವಿಭಾಗಾಧಿಕಾರಿ ಜಿ.ಎಚ್.ಸತ್ಯನಾರಾಯಣ ಅವರನ್ನು ಪ್ರಶ್ನಿಸಿದರು. ಕಂದಾಯ ಮಂತ್ರಿ ಸ್ವಲ್ಪ ಮಟ್ಟಿಗೆ ಜನರ ಪರವಾಗಿದ್ದಾರೆ. ಆದರೆ ಅವರಿಗೆ ಮಲೆನಾಡಿನ ಸಮಸ್ಯೆಗಳ ಬಗ್ಗೆ ಅರ್ಥವಾಗುತ್ತಿಲ್ಲ. ಬಯಲು ಸೀಮೆ ಮೂಲದ ಅರಣ್ಯ ಮಂತ್ರಿಗೆ ಅರಣ್ಯ, ಡೀಮ್ಡ್ ಫಾರೆಸ್ಟ್, ಸೊಪ್ಪಿನಬೆಟ್ಟ, ದನಕ್ಕೆ ಮುಫತ್ತುಗಳ ಬಗ್ಗೆ ವ್ಯತ್ಯಾಸವೇ ತಿಳಿಯುತ್ತಿಲ್ಲ. ಅರಣ್ಯ ಭೌತಿಕ ಪರಿಶೀಲನಾ ಸಮಿತಿ ಕೆಲಸ ಮಾಡುತ್ತಿಲ್ಲ’ ಎಂದು ದೂರಿದರು. ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿದಾರರು ಕನಿಷ್ಠ 10,000 ಅರ್ಜಿ ಸಲ್ಲಿಸಿದ್ದಾರೆ. ಕಂದಾಯ, ಅರಣ್ಯ ಇಲಾಖೆಯ ಅಧಿಕಾರಿಗಳು ಅರ್ಜಿಗಳನ್ನು ಸರಿಯಾಗಿ ಪರಿಶೀಲನೆ ಮಾಡದೆ ವಜಾ ಮಾಡುತ್ತಿದ್ದಾರೆ. ಬಗರ್‌ಹುಕುಂ ಸಮಿತಿಯ ಮುಂದೆ ಕೇವಲ 120 ಅರ್ಜಿಗಳು ಮಾತ್ರ ಬಂದರೆ ಉಳಿದ 9 ಸಾವಿರ ಅರ್ಜಿದಾರರ ಪಾಡೇನು? ಮಠದವರು ಹೆಚ್ಚುವರಿ ಯೂನಿಟ್ ಜಮೀನು ಘೋಷಣೆ ಮಾಡಿಕೊಂಡ ನಂತರವೂ ಪುನಃ ಜಮೀನಿನ ಆಸೆಗೆ ಬಿದ್ದಿದ್ದಾರೆ. ಯೂನಿಟ್‌ಗಳ ಸಮಸ್ಯೆ ಬಗೆಹರಿಸಬೇಕು’ ಎಂದು ಅವರು ಒತ್ತಾಯಿಸಿದರು. ಅಗಳಬಾಗಿಲು ಗ್ರಾಮಗಳು ಹೋಬಳಿ ಕೇಂದ್ರದಿಂದ ದೂರ ಇವೆ. ಸದರಿ ಗ್ರಾಮದಲ್ಲಿ ವಾಸಿಸುವ ಜನರು 30 ಕಿ.ಮೀ. ಕ್ರಮಿಸಬೇಕಾದ ಅನಿವಾರ್ಯತೆ ಇದೆ ಎಂದು ವಿವಿಧ ಗ್ರಾಮಗಳ ಲೆಕ್ಕಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಗ್ರಾಮಗಳ ಬದಲಾವಣೆಗೆ ಕ್ರಮ ವಹಿಸಲಾಗುತ್ತದೆ ಎಂದು ತಹಶೀಲ್ದಾರ್ ಎಸ್.ರಂಜಿತ್ ಭರವಸೆ ನೀಡಿದರು. ಸಭೆಯಲ್ಲಿ ಡಿವೈಎಸ್ಪಿ ಅರವಿಂದ್ ಎನ್. ಕಲಗುಜ್ಜಿ, ಇಒ ಎನ್.ಶೈಲಾ ಇದ್ದರು. ಸರ್ಕಾರದ ವಿವಿಧ ಯೋಜನೆಯಲ್ಲಿ ವಸತಿ ಫಲಾನುಭವಿಗಳು ಪೂರ್ಣ ಅನುದಾನವನ್ನು ಮರಳಿಗೆ ವ್ಯಯ ಮಾಡುವ ಸ್ಥಿತಿ ತಾಲ್ಲೂಕಿನಲ್ಲಿ ನಿರ್ಮಾಣವಾಗಿದೆ. ಶಿವಮೊಗ್ಗಕ್ಕೆ ಲಾರಿ ಲೋಡ್‌ಗಟ್ಟಲೇ ಅಕ್ರಮ ಮರಳು ಸಾಗಣೆಯಾಗುತ್ತಿದ್ದರೂ ಯಾವ ಇಲಾಖೆಯೂ ಗಮನ ಹರಿಸುವುದಿಲ್ಲ. ಸ್ಥಳೀಯರಿಗೆ ಮಾತ್ರವೇ ಕಾನೂನು ಅನ್ವಯವಾಗುತ್ತದೆಯೇ’ ಎಂದು ಪೊಲೀಸ್ ಇಲಾಖೆಯನ್ನು ಶಾಸಕ ಆರಗ ಜ್ಞಾನೇಂದ್ರ ಪ್ರಶ್ನಿಸಿದರು. ಜಿಲ್ಲಾಧಿಕಾರಿಗೆ ಹೇಳಿದರೆ, ನೀವೇ ಮರಳು ಲಾರಿ ಬಿಡಿಸಿದ್ದು ಅಂತ ನನ್ನನ್ನೇ ಪ್ರಶ್ನಿಸುತ್ತಾರೆ. ನಾನೆಲ್ಲಿ ಮರಳು ಲಾರಿ ಬಿಡಲು ಹೇಳಿದ್ದೀನಿ’ ಎಂದು ಮಾಳೂರು ಠಾಣಾಧಿಕಾರಿ ವಿರುದ್ಧ ರೇಗಿದರು. ದಬ್ಬಣಗದ್ದೆಯಲ್ಲಿ ನಾನೇ ಹಿಡಿದುಕೊಟ್ಟ ಟ್ರ್ಯಾಕ್ಟರ್ ಅನ್ನು ದಂಡ ಕಟ್ಟಿಸಿಕೊಂಡು ಬಿಡುತ್ತೀರಿ. ಆದರೆ ಆಗುಂಬೆಯಲ್ಲಿನ ಟ್ರ್ಯಾಕ್ಟರ್ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಿ. ಇದೆಂತಹ ಕಾನೂನು ನಿಮ್ಮದು? ಇಬ್ಬರ ಮೇಲೂ ಕಳ್ಳತನ ಪ್ರಕರಣ ದಾಖಲು ಮಾಡಬೇಕಲ್ಲವೇ? ನಿಮಗೆ ತಾಕತ್ತು ಇಲ್ಲವೇ’ ಎಂದು ಆರಗ ಕೇಳಿದರು.

### ನಾನೇ ಮರಳು ಲಾರಿ ಬಿಡಿಸಿದ್ದು ಅಂತಾರೆ:

ತುಂಗಾ, ಮಾಲತಿ ನದಿ ತೀರದಲ್ಲಿ ವಾಸಿಸುವ ಗ್ರಾಮೀಣರಿಗೆ ಮರಳು ಸಿಗುತ್ತಿಲ್ಲ. ಸರ್ಕಾರದ ವಿವಿಧ ಯೋಜನೆಯಲ್ಲಿ ವಸತಿ ಫಲಾನುಭವಿಗಳು ಪೂರ್ಣ ಅನುದಾನವನ್ನು ಮರಳಿಗೆ ವ್ಯಯ ಮಾಡುವ ಸ್ಥಿತಿ ತಾಲ್ಲೂಕಿನಲ್ಲಿ ನಿರ್ಮಾಣವಾಗಿದೆ. ಶಿವಮೊಗ್ಗಕ್ಕೆ ಲಾರಿ ಲೋಡ್‌ಗಟ್ಟಲೇ ಅಕ್ರಮ ಮರಳು ಸಾಗಣೆಯಾಗುತ್ತಿದ್ದರೂ ಯಾವ ಇಲಾಖೆಯೂ ಗಮನ ಹರಿಸುವುದಿಲ್ಲ. ಸ್ಥಳೀಯರಿಗೆ ಮಾತ್ರವೇ ಕಾನೂನು ಅನ್ವಯವಾಗುತ್ತದೆಯೇ’ ಎಂದು ಪೊಲೀಸ್ ಇಲಾಖೆಯನ್ನು ಶಾಸಕ ಆರಗ ಜ್ಞಾನೇಂದ್ರ ಪ್ರಶ್ನಿಸಿದರು.

**ಕಾನೂನುಬಾಹಿರ ಚಿಕಿತ್ಸೆ; ಚರ್ಮರೋಗ ತಜ್ಞರ ಮನವಿ**

# ನಕಲಿ ವೈದ್ಯರ ವಿರುದ್ಧ ಕ್ರಮಕ್ಕೆ ಆಗ್ರಹ



ಚರ್ಮರೋಗ ತಜ್ಞರು ಡಾ. ಶರಣಪ್ರಕಾಶ ಪಾಟೀಲ ಅವರ ಜತೆಗೆ ಚರ್ಚಿಸಿದರು

**ಬೆಂಗಳೂರು:** ‘ಕೆಲ ದಂತವೈದ್ಯರು ಹಾಗೂ ನಕಲಿ ವೈದ್ಯರು ಕಾನೂನು ಬಾಹಿರವಾಗಿ ಚರ್ಮದ ಚಿಕಿತ್ಸೆ, ಕೂದಲು ಕಸಿ ಮತ್ತು ಸೌಂದರ್ಯ ಚಿಕಿತ್ಸೆಗಳನ್ನು ಒದಗಿಸುತ್ತಿದ್ದು, ಅವರ ವಿರುದ್ಧ ಕ್ರಮಕೈಗೊಳ್ಳಬೇಕು’ ಎಂದು ಚರ್ಮರೋಗ ತಜ್ಞರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಭಾರತೀಯ ಚರ್ಮ, ಲೈಂಗಿಕ ಮತ್ತು ಕುಷ್ಠ ರೋಗ ತಜ್ಞರ ಸಂಘದ (ಐಎಡಿವಿಎಲ್) ಕರ್ನಾಟಕ ಶಾಖೆಯ ಪ್ರತಿನಿಧಿಗಳ ನಿಯೋಗವು ಇಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರನ್ನು ಭೇಟಿ ಮಾಡಿ, ಚರ್ಚಿಸಿದರು.

‘ರಾಜ್ಯದಾದ್ಯಂತ ‘ಡೆಂಟಲ್ ಸ್ಕಿನ್ , ಹೇರ್ ಕ್ಲಿನಿಕ್’ಗಳು ಹರಡಿಕೊಂಡಿವೆ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ನಿಗದಿತ ಚಿಕಿತ್ಸೆಗೆ ಅರ್ಹತೆ ಹೊಂದಿರದ ನಕಲಿ ವೈದ್ಯರ ಮೇಲೆ ಕಾನೂನಿನ ಅಡಿ ಕ್ರಮ ಕೈಗೊಳ್ಳಬೇಕು. ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾರ್ಗಸೂಚಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು’ ಎಂದು ಒತ್ತಾಯಿಸಿದರು. ಐಎಡಿವಿಎಲ್ ಕರ್ನಾಟಕ ಶಾಖೆಯ ಗೌರವ ಖಜಾಂಚಿ ಡಾ. ಸುಜಲಾ ಸಚ್ಚಿದಾನಂದ ಆರಾಧ್ಯ, ಕೆಪಿಎಂಇ ಮತ್ತು ಪ್ರಾಕ್ಟೀಸ್ ಮ್ಯಾನೇಜ್‌ಮೆಂಟ್ ಸೆಲ್ ಅಧ್ಯಕ್ಷ ಡಾ. ವೆಂಕಟರಾಮ್ ಮೈಸೂರು, ಸಂಚಾಲಕ ಡಾ. ಜಗದೀಶ್ ಪಿ., ಡಾ. ಅಕ್ಷಯ್ ಸಾಮಗಾನಿ, ರಾಜಾಜಿನಗರ ಇಎಸ್‌ಐಸಿ ವೈದ್ಯಕೀಯ ಕಾಲೇಜಿನ ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಗಿರೀಶ್ ಎಂ.ಎಸ್. ಉಪಸ್ಥಿತರಿದ್ದರು.

# ಕಂದಾಯ ಗ್ರಾಮ ರಚನೆಗೆ ಚಾಲನೆ



ತುಮಕೂರಿನಲ್ಲಿ ಕಂದಾಯ ಗ್ರಾಮ ರಚನೆ ಸಂಬಂಧ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮದಲ್ಲಿ ಅಧಿಕಾರಿಗಳು, ನೌಕರರು ಭಾಗವಹಿಸಿದ್ದರು.

**ತುಮಕೂರು:** ಜಿಲ್ಲೆಯಲ್ಲಿ ಹೊಸದಾಗಿ ಕಂದಾಯ ಗ್ರಾಮ, ಉಪಗ್ರಾಮ, ಬಡಾವಣೆ ರಚನೆ ಬಗ್ಗೆ ಒಂದು ವಾರದಲ್ಲಿ ಪ್ರಸ್ತಾವ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಕಂದಾಯ ಇಲಾಖೆ ಅಧಿಕಾರಿಗಳಿಗೆ ಇಲ್ಲಿ ನಿರ್ದೇಶಿಸಿದರು.

ಕಂದಾಯ ಇಲಾಖೆ, ಜಿಲ್ಲಾ ಪಂಚಾಯಿತಿ, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಸಹಯೋಗದಲ್ಲಿ ಕಂದಾಯ ಗ್ರಾಮ, ಉಪಗ್ರಾಮ ಹಾಗೂ ಬಡಾವಣೆ ರಚನೆ ಸಂಬಂಧ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

50ಕ್ಕೂ ಹೆಚ್ಚಿನ ಸಂಖ್ಯೆಯ ಮನೆಗಳು ಅಥವಾ 250ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದರೆ ಕಂದಾಯ ಗ್ರಾಮವನ್ನಾಗಿ ಗುರುತಿಸಬೇಕು. ಇಂತಹ ಗ್ರಾಮ ಮೂಲ ಗ್ರಾಮದಿಂದ 1 ಕಿ.ಮೀ ಅಂತರದಲ್ಲಿ ಇರಬೇಕು. 10ಕ್ಕೂ ಅಧಿಕ, 50ಕ್ಕಿಂತ ಕಡಿಮೆ ಮನೆಗಳನ್ನು ಹೊಂದಿರುವ ಹಾಗೂ ಕಂದಾಯ ಗ್ರಾಮವಾಗಲು ಅರ್ಹವಲ್ಲದ ಜನವಸತಿ ಪ್ರದೇಶವನ್ನು ಉಪ ಗ್ರಾಮವನ್ನಾಗಿ ಪರಿಗಣಿಸಿ ಪ್ರಸ್ತಾವ ಸಲ್ಲಿಸಬೇಕು ಎಂದು ತಿಳಿಸಿದರು.

ಕಂದಾಯ ಇಲಾಖೆ ಆಯುಕ್ತಾಲಯದ ತಹಶೀಲ್ದಾರ್ ಗಣಪತಿಶಾಸ್ತ್ರಿ, ಕಂದಾಯ ಗ್ರಾಮ ರಚನೆಯ ಕಾಯ್ದೆ, ನಿಯಮ, ಉಪ ಗ್ರಾಮಗಳಿಗಿರಬೇಕಾದ ಅರ್ಹತೆ, ಪ್ರಸ್ತಾವ ತಯಾರಿಕೆ, ಕಂದಾಯ ಗ್ರಾಮಗಳನ್ನಾಗಿ ಮಾಡುವ ಮುನ್ನ ಅಧಿಸೂಚನೆ, ಹಕ್ಕುಪತ್ರ ನೀಡಿಕೆ, ಹಕ್ಕುಪತ್ರ ತಂತ್ರಾಂಶ ನಿರ್ವಹಣೆ, ಹಕ್ಕುಪತ್ರ ತಿದ್ದುಪಡಿ ಬಗ್ಗೆ ಮಾಹಿತಿ ನೀಡಿದರು.

**ಸುಸಜ್ಜಿತ ಮಳಿಗೆಗಳಿಗೆ ಬೀಗ, ತ್ರಿಶಂಕು ಸ್ಥಿತಿಯಲ್ಲಿ ವರ್ತಕರು**

# ಸೌಲಭ್ಯಗಳಿದ್ದರೂ ನಡೆಯದ ವಹಿವಾಟು

**ಬೆಂಗಳೂರು:** ಬಿನ್ನಿಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಹೂವಿನ ವ್ಯಾಪಾರಿಗಳಿಗಾಗಿ ಸುಸಜ್ಜಿತ ಮಾರುಕಟ್ಟೆ ನಿರ್ಮಿಸಿದೆ. ಆದರೆ, ಇಲ್ಲಿ ರೈತರು, ಗ್ರಾಹಕರು ಬಾರದೇ ವ್ಯಾಪಾರ ವಹಿವಾಟು ನಡೆಯದೇ ಪ್ರಾಂಗಣವೆಲ್ಲ ಭಣಗುಡುತ್ತಿದೆ. ಬಿನ್ನಿಪೇಟೆ ಎಪಿಎಂಸಿಯಲ್ಲಿ 1 ಎಕರೆ 20 ಗುಂಟೆ ಪ್ರದೇಶದಲ್ಲಿ ಹೂವಿನ ಮಾರುಕಟ್ಟೆ ನಿರ್ಮಿಸಲಾಗಿದೆ. ಸುಜ್ಜಿತ ಮಳಿಗೆಗಳಿವೆ. ಪ್ರತಿ ಮಳಿಗೆಗೆ ನೀರಿನ ಸಂಪರ್ಕವಿದೆ. ಪಾರ್ಕಿಂಗ್, ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಕೆಲವು ಮಳಿಗೆಗಳಲ್ಲಿ ವರ್ತಕರೂ ಇದ್ದಾರೆ. ಇಷ್ಟೆಲ್ಲ ಸೌಲಭ್ಯಗಳಿದ್ದರೂ, ರೈತರು, ವ್ಯಾಪಾರಿಗಳು ಮತ್ತು ಗ್ರಾಹಕರು ಮಾತ್ರ ಬರುತ್ತಿಲ್ಲ. ಇದರಿಂದ, ಈಗಿರುವ ವರ್ತಕರು ಮಳಿಗೆಗೆ ಬಾಡಿಗೆ ಭರಿಸಲಾಗದೆ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಹೆಚ್ಚುವರಿಯಾಗಿ 32 ಮಳಿಗೆಗಳನ್ನು ನಿರ್ಮಿಸಲಾಗಿದ್ದು, ಇನ್ನೂ ಅವುಗಳ ಹಂಚಿಕೆಯಾಗಿಲ್ಲ. ಕೋವಿಡ್ ಸಂದರ್ಭದಲ್ಲಿ ಈ ಮಾರುಕಟ್ಟೆ ವಿಶಾಲವಾಗಿರುವ ಕಾರಣ, ನಗರದ ಎಲ್ಲ ಹೂವಿನ ವರ್ತಕರು ಬಿನ್ನಿಪೇಟೆಯಲ್ಲಿ ವ್ಯಾಪಾರ?ವಹಿವಾಟು ಮಾಡುತ್ತಿದ್ದರು.




ಬಿನ್ನಿಪೇಟೆಯ ಎಪಿಎಂಸಿ ಹೂವಿನ ಮಾರುಕಟ್ಟೆಯ ಒಂದು ನೋಟ.

ಕೋವಿಡ್ ನಂತರ ಇಲ್ಲಿದ್ದ ಕೆಲ ವರ್ತಕರು ಮತ್ತೆ ಕೆ.ಆರ್. ಮಾರುಕಟ್ಟೆ, ಅವೆನ್ಯೂ ರಸ್ತೆ, ವಿಲ್ಸನ್ ಗಾರ್ಡನ್, ಸುಂಕದಕಟ್ಟೆ ಸೇರಿದಂತೆ ನಗರದ ವಿವಿಧ ರಸ್ತೆಗಳ ಬದಿಯಲ್ಲಿ ಹೂವಿನ ವ್ಯಾಪಾರ ಮಾಡುತ್ತಿದ್ದಾರೆ. ಹೀಗಾಗಿ ಇಲ್ಲಿಗೆ ಬರುತ್ತಿದ್ದ ರೈತರು, ಗ್ರಾಹಕರ ಸಂಖ್ಯೆ ಕಡಿಮೆಯಾಗಿದೆ. ಹೂವಿನ ವರ್ತಕರಿಗೆ ವ್ಯಾಪಾರವಿಲ್ಲದೇ ‘ತ್ರಿಶಂಕು ಸ್ಥಿತಿ’ಗೆ ತಲುಪಿದ್ದಾರೆ. 40ಕ್ಕೂ ಹೆಚ್ಚು ಉನ್ನತ ತಳಿ ಹೂವು ಮಾರಾಟಗಾರರಿಗೆ ಬಿನ್ನಿಪೇಟೆ ಎಪಿಎಂಸಿಯಿಂದ ಪರವಾನಿಗೆ ನೀಡಲಾಗಿದೆ. ಆದರೆ, ಅವರೆಲ್ಲರೂ ಈಗ ವಿಲ್ಸನ್ ಗಾರ್ಡನ್‌ನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಅಲ್ಲಿ ವ್ಯಾಪಾರ ಮಾಡಬಾರದು ಎಂದು ಕೋರ್ಟ್ ಆದೇಶ ನೀಡಿದೆ. ಆದರೂ, ಬಿಬಿಎಂಪಿ ಅಧಿಕಾರಿಗಳು ವ್ಯಾಪಾರ ಮಾಡಲು ಅವಕಾಶ ನೀಡಿದ್ದಾರೆ. ಅವರೆಲ್ಲರನ್ನೂ ಇಲ್ಲಿಗೆ ಸ್ಥಳಾಂತರಿಸಬೇಕು’ ಎಂದು ನಾಡಪ್ರಭು ಕೆಂಪೇಗೌಡ ಹೂವಿನ ವ್ಯಾಪಾರಿಗಳ ಸಂಘದ ಉಪಾಧ್ಯಕ್ಷ ಆನಂದ್ ಕುಮಾರ್ ತಿಳಿಸಿದರು.

‘ಬಿನ್ನಿಪೇಟೆ ಎಪಿಎಂಸಿ ಸಗಟು ಹೂವಿನ ಮಾರುಕಟ್ಟೆಯಲ್ಲಿರುವ ಸೌಲಭ್ಯಗಳ ಬಗ್ಗೆ ರೈತರಲ್ಲಿ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು’ ಎಂದು ಒತ್ತಾಯಿಸಿದರು.

‘ಈ ಮಾರುಕಟ್ಟೆಗೆ ಮೇಲ್ಸಾವಣಿ ನಿರ್ಮಿಸಲು ಮತ್ತು ಬಾಳೆಕಾಯಿ ಮಂಡಿಯಿಂದ ಇಲ್ಲಿಗೆ ನೇರವಾಗಿ ಸಂಪರ್ಕ ಕಲ್ಪಿಸುವ ಸ್ಕೈವಾಕ್ ನಿರ್ಮಿಸಲು ಟೆಂಡರ್ ನೀಡಲಾಗಿದೆ. ಕೆಲ ದಿನಗಳಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ’ ಎಂದು ಎಪಿಎಂಸಿ ಅಧಿಕಾರಿಯೊಬ್ಬರು ತಿಳಿಸಿದರು.

‘ಅನಧಿಕೃತವಾಗಿ ವ್ಯಾಪಾರ ಮಾಡುವ ಹೂವಿನ ವರ್ತಕರನ್ನು ಇಲ್ಲಿನ ಮಾರುಕಟ್ಟೆಗೆ ಸ್ಥಳಾಂತರಿಸಬೇಕೆಂದು ಬಿಬಿಎಂಪಿ, ಪೊಲೀಸರಿಗೆ ಮನವಿ ಮಾಡಲಾಗಿದೆ. ಆದರೇ ಯಾರು ಸ್ಪಂದಿಸುತ್ತಿಲ್ಲ. ಎಪಿಎಂಸಿ ಕಾಯ್ದೆ ಇಲ್ಲದಿರುವು ದರಿಂದ ನಾವು ಏನೂ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ’ ಎಂದರು. ಬಿನ್ನಿಪೇಟೆ ಹೂವಿನ ಮಾರುಕಟ್ಟೆಗೆ ಪ್ರತಿನಿತ್ಯ ಎರಡು ಹೂವಿನ ವಾಹನಗಳು ಮಾತ್ರ ಬರುತ್ತಿವೆ. ಕೆ.ಆರ್. ಮಾರುಕಟ್ಟೆಯಿಂದ ಹೂ ಖರೀದಿಸಿ ಇಲ್ಲಿ ಮಾರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

# ಚನ್ನಮ್ಮ, ರಾಯಣ್ಣ ಇತಿಹಾಸ ಅನಾವರಣ



ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನವನ್ನು ಶಾಲಾ ವಿದ್ಯಾರ್ಥಿಗಳು ಕುತೂಹಲದಿಂದ ವೀಕ್ಷಿಸಿದರು.

### ಗಮನ ಸೆಳೆಯುತ್ತಿರುವ ಐಕ್ಯ ಸ್ಮಾರಕದ ಮಾದರಿ:

ಬೆಳಗಾವಿ ಜಿಲ್ಲೆಯ ಬೈಲ ಹೊಂಗಲದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ಅವರ ಐಕ್ಯ ಸ್ಮಾರಕದ ಮಾದರಿಯ ಕೇಂದ್ರ ಗೋಪುರವನ್ನು ಹೂವುಗಳಲ್ಲಿ ಮರು ಸೃಷ್ಟಿಸಲಾಗಿದೆ. ಈ ಗೋಪುರವು ಕಂಬಗಳಿಂದ ಕೂಡಿದ್ದು, 8 ಅಡಿ ಅಗಲ ಹಾಗೂ 13 ಅಡಿ ಎತ್ತರದ ಆಕರ್ಷಕ ಪುಷ್ಪ ಕಮಾನುಗಳನ್ನು ಹೊಂದಿದೆ. ಈ ಪುಷ್ಪ ಮಾದರಿಗೆ ಒಂದು ಬಾರಿಗೆ 50 ಸಾವಿರ ಗುಲಾಬಿ ಹೂವುಗಳು, 2.40 ಲಕ್ಷ ಸೇವಂತಿಗೆ, 12 ಸಾವಿರಕ್ಕೂ ಹೆಚ್ಚು ಗ್ರೀನ್ ಫೋಲಿಯೇಜ್ ಗಳನ್ನು ಬಳಸಿಕೊಳ್ಳಲಾಗಿದೆ. ಇದು ಸಾರ್ವಜನಿಕರ ಕಣ್ಮನ ಸೆಳೆಯುತ್ತಿದ್ದು, ಇದರ ಮುಂಭಾಗದಲ್ಲಿ ಸಾರ್ವಜನಿಕರು ಫೋಟೊ ತೆಗೆಸಿಕೊಳ್ಳುತ್ತಿದ್ದರು.

**ಬೆಂಗಳೂರು:** 'ಸಸ್ಯಕಾಶಿ' ಲಾಲ್‌ಬಾಗ್‌ನ ಗಾಜಿನ ಮನೆಯೊಳಗೆ ಬಣ್ಣ ಬಣ್ಣದ ಹೂವುಗಳಲ್ಲಿ ಅರಳಿದ ಕಿತ್ತೂರು ಕೋಟೆ, ಅದರ ಮೇಲೆ ಕಿತ್ತೂರು ಸಂಸ್ಥಾನದ ಲಾಂಛನ, ನೂರಾರು ಪುಷ್ಪಗಳ ಮಧ್ಯೆ ಕಿತ್ತೂರು ರಾಣಿ ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಗಳು ನೋಡಗರ ಕಣ್ಮನ ಸೆಳೆಯುತ್ತಿವೆ.

ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ 'ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ವಿಷಯ ಆಧಾರಿತ 218ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಪ್ರದರ್ಶನವು ಆಗಸ್ಟ್ 7ರಿಂದ 18ರ ವರೆಗೆ ನಡೆಯಲಿದೆ. ಗಾಜಿನ ಮನೆಯ ಪ್ರವೇಶ ದ್ವಾರದ ಭಾಗದಲ್ಲಿ ಎಕ್ಸಾಟಿಕ್ ಆರ್ಕಿಡ್ಸ್ ಜಾತಿಯ ಫೆಲನಾಪ್ಸಿಸ್, ಡೆಂಡ್ರೊಬಿಯಂ, ವಾಂಡಾ, ಮೊಕಾರಾ, ಕ್ಯಾಟ್ಲಿಲಿಯಾ, ಆನ್ಸಿಡಿಯಂ ಹಾಗೂ ಕ್ಯಾಲಾಲಿಲ್ಲಿ, ವೈವಿಧ್ಯಮಯ ಜಿರೇನಿಯಂ ಜಾತಿಯ 1.75 ಲಕ್ಷಕ್ಕೂ ಹೆಚ್ಚಿನ ಹೂವು ಮತ್ತು ಎಲೆ ಜಾತಿಯ ಗಿಡಗಳನ್ನು ಪ್ರದರ್ಶಿಸ ಲಾಗಿದೆ. ಇದರ ಮುಂಭಾಗದಲ್ಲಿ ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಪುತ್ಥಳಿಗಳು ರಾರಾಜಿಸುತ್ತಿವೆ.

ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಕಾರ್ಯಕ್ಷೇತ್ರವಾಗಿದ್ದ ಕಿತ್ತೂರು ಕೋಟೆ ಮಾದರಿಯು ಪುಷ್ಪಗಳಲ್ಲಿ ಅನಾವರಣ ಗೊಂಡಿದೆ. ಇದು 18 ಅಡಿ ಎತ್ತರ, 34 ಅಡಿ ಸುತ್ತಳತೆಯನ್ನು ಹೊಂದಿದೆ. ಒಂದು ಬಾರಿಗೆ ಹಸಿರು, ಬಿಳಿ, ಕಂದು ಹಾಗೂ ಗುಲಾಬಿ ವರ್ಣದ 1.5 ಲಕ್ಷ ಡಚ್ ಗುಲಾಬಿ ಹೂವು, 1.5 ಲಕ್ಷ ಹೈಬ್ರಿಡ್ ಸೇವಂತಿಗೆ ಹಾಗೂ 30 ಸಾವಿರ ಕೋಲ್ಕತ್ತ ಸೇವಂತಿಗೆ ಹೂವುಗಳನ್ನು ಬಳಸಿಕೊಂಡು ಈ ಪರಿಕಲ್ಪನೆ ಸಿದ್ಧಪಡಿಸ ಲಾಗಿದೆ. ಒಟ್ಟಾರೆ ಈ ಮಾದರಿಗೆ 6.6 ಲಕ್ಷ ಹೂವುಗಳನ್ನು ಬಳಸಿಕೊಳ್ಳಲಾಗುತ್ತದೆ. ಇದು ಫಲಪುಷ್ಪ ಪ್ರದರ್ಶನದ ಆಕರ್ಷಣೆ ಆಗಿದೆ. ಕೋಟೆ ಮಾದರಿ ನಾಲ್ಕು ಮೂಲೆಗಳಲ್ಲಿ ಮಲ್ಲಸರ್ಜ, ರಾಜಗುರು, ಅಮಟೂರು ಬಾಳಪ್ಪ ಮತ್ತು ಸರದಾರ ಗುರುಸಿದ್ಧಪ್ಪ ಅವರ ಪ್ರತಿಮೆಗಳು ನೋಡುಗರನ್ನು ಸೆಳೆಯುತ್ತಿವೆ.

ಗಾಜಿನ ಮನೆಯ ಬಲಬದಿಯಲ್ಲಿ 12 ಅಡಿ ಎತ್ತರದ ಕೋಟೆ ವಿನ್ಯಾಸದ ವರ್ಟಿಕಲ್ ಗಾರ್ಡನ್ ಮಾದರಿ ರೂಪಿಸಲಾಗಿದೆ. ಈ ಕೋಟೆಯ ಮೇಲೆ 10 ಅಡಿ ಎತ್ತರದಲ್ಲಿ ಭಾರತದ ರಾಷ್ಟ್ರ ಲಾಂಛನ ತಲೆ ಎತ್ತಿದೆ. ಇದಕ್ಕೆ ವಿವಿಧ ವರ್ಣದ ಆಕ್ಸಿಕಾರ್ಡಿಯಂ ಗೋಲ್ಡ್, ಗ್ರೀನ್, ಬ್ರಾಂಜ್, ಸಿಂಗೋನಿಯಂ ರೆಡ್, ಕ್ಲೋರೋಫೈಟಮ್, ಸೇವಂತಿಗೆ, ಫರ್ನ್ಸ್, ಗುಲಾಬಿ ಸೇರಿದಂತೆ ಒಟ್ಟು 1.75 ಲಕ್ಷಕ್ಕೂ ಹೆಚ್ಚು ಆಕರ್ಷಕ ಗಿಡಗಳನ್ನು ಬಳಸಿಕೊಂಡು ಸಿಂಗಾರ ಮಾಡಲಾಗಿದೆ. ಇದರ ಮೇಲೆ ಪುಷ್ಪಾಲಂಕೃತ ಅಶೋಕ ಸ್ತಂಭ ಗಮನ ಸೆಳೆಯುತ್ತಿದೆ. ಗಾಜಿನ ಮನೆಯ ಹಿಂಭಾಗದಲ್ಲಿ ರಾಣಿ ಅಬ್ಬಕ್ಕ ದೇವಿ, ಚೆನ್ನಾ ಭೈರಾದೇವಿ, ಬೆಳವಾಡಿ ಮಲ್ಲಮ್ಮ, ಕೆಳದಿ ಚನ್ನಮ್ಮ, ವೀರಮ್ಮಾಜಿ, ಒನಕೆ ಓಬವ್ವನವರ ಪ್ರತಿಮೆಗಳು ರಾರಾಜಿಸುತ್ತಿವೆ. ಈ ಹೋರಾಟಗಾರ್ತಿಯರ ಬಗ್ಗೆ ಚಿತ್ರ ಮಾಹಿತಿಯನ್ನು ಪ್ರದರ್ಶಿಸಲಾಗಿದೆ. ಮೊದಲ ದಿನ ವಯಸ್ಕರು, ಮಕ್ಕಳೂ ಸೇರಿ 14,317 ಮಂದಿ ಫಲಪುಷ್ಪ ಪ್ರದರ್ಶನ ವೀಕ್ಷಿಸಿದ್ದಾರೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ನಾನು ಮೊದಲ ಸಲ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರದ ವತಿಯಿಂದಲೇ ಕಿತ್ತೂರು ರಾಣಿ ಚನ್ನಮ್ಮ ಅವರ ಜಯಂತಿ ಆಚರಿಸುವುದಕ್ಕೆ ಚಾಲನೆ ನೀಡಲಾಗಿತ್ತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಫಲಪುಷ್ಪ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, 'ಸಂಗೊಳ್ಳಿ ರಾಯಣ್ಣನವರಿಗೆ ಗಲ್ಲಿಗೇರಿಸಿದ್ದ ನಂದಗಡ ಹಾಗೂ ಅವರ ಜನ್ಮಸ್ಥಳ ಸಂಗೊಳ್ಳಿಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರನ್ನು ಸ್ಮರಿಸಿಕೊಳ್ಳಬೇಕು. ಈ ಫಲಪುಷ್ಪ ಪ್ರದರ್ಶನದ ಮೂಲಕ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಲ್ಲಿಸುತ್ತಿರುವುದು ಶ್ಲಾಘನೀಯ' ಎಂದು ಹೇಳಿದರು.

ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಡಾ.ಎಂ.ಸಿ.ಸುಧಾಕರ್, ಶಾಸಕ ಉದಯ್ ಬಿ.ಗರುಡಾಚಾರ್, ಹರಿಹರ ಪಂಚಮಸಾಲಿ ವೀರಶೈವ ಲಿಂಗಾಯಿತ ಪೀಠದ ವಚನಾನಂದ ಸ್ವಾಮೀಜಿ, ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ನಿರ್ದೇಶಕ ರಮೇಶ್ ಡಿ.ಎಸ್. ಉಪಸ್ಥಿತರಿದ್ದರು

# ಡಬ್ಲ್ಯೂಟಿಇ: ಸ್ವಚ್ಛತೆಗೆ ಆದ್ಯತೆ ನೀಡಿ



ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಬಿಡದಿಯ ಘಟಕಕ್ಕೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದರು

**ಬೆಂಗಳೂರು:** 'ಬಿಡದಿಯಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದಲ್ಲಿ(ಡಬ್ಲ್ಯುಟಿಇ) ಸ್ವಚ್ಛತೆ ಜತೆಗೆ ನಿರ್ವಹಣೆಗೂ ಆದ್ಯತೆ ನೀಡಬೇಕಿದೆ. ಈ ಕುರಿತು ಬಿಬಿಎಂಪಿ ಹಾಗೂ ಇಂಧನ ಇಲಾಖೆಯ ಉನ್ನತ ಅಧಿಕಾರಿ ಗಳೊಂದಿಗೆ ಸಭೆ ನಡೆಸಿ ಚರ್ಚಿಸಲಾಗುವುದು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಚಿವರು, 'ಘಟಕಕ್ಕೆ ನಗರದ ವಿವಿಧ ಭಾಗಗಳಿಂದ ಲಾರಿಗಳಲ್ಲಿ ತ್ಯಾಜ್ಯ ತರಲಾಗುತ್ತದೆ. ಲಾರಿಗಳು ಇಲ್ಲಿ ತ್ಯಾಜ್ಯ ಸುರಿದು ವಾಪಸಾಗುವಾಗ ದುರ್ವಾಸನೆ ಬರುತ್ತದೆ ಎಂಬ ದೂರುಗಳಿವೆ. ಹೀಗಾಗಿ ತ್ಯಾಜ್ಯ ಖಾಲಿ ಮಾಡಿದ ಲಾರಿಗಳು ವಾಪಸ್ ಹೋಗುವ ಮುನ್ನ ಸ್ವಚ್ಛಗೊಳಿಸಲು ಆವರಣದಲ್ಲಿಯೇ ಸ್ವಚ್ಛತಾ ವ್ಯವಸ್ಥೆ ಕಲ್ಪಿಸಬೇಕು' ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

'ಘಟಕದಿಂದ ದುರ್ವಾಸನೆ ಬಂದು ಸುತ್ತಲಿನ ನಿವಾಸಿಗಳಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಪ್ರತಿ ನಿತ್ಯ ವಾಸನೆ ನಿಯಂತ್ರಣ ರಾಸಾಯನಿಕ ಬಳಸಬೇಕು' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. 'ವಿದ್ಯುತ್ ಉತ್ಪಾದನಾ ಘಟಕಕ್ಕೆ ಬರುವ ತ್ಯಾಜ್ಯದಲ್ಲಿ ಕೆಲವೊಂದು ಸಮಸ್ಯೆಗಳಿವೆ. 'ವಿದ್ಯುತ್ ಉತ್ಪಾದನಾ ಘಟಕಕ್ಕೆ ಬರುವ ತ್ಯಾಜ್ಯದಲ್ಲಿ ಕೆಲವೊಂದು ಸಮಸ್ಯೆಗಳಿವೆ. ಅದೇ ರೀತಿ ಖಾಸಗಿಯವರು ಘಟಕ ನಿರ್ವಹಿಸುವ ವಿಚಾರದಲ್ಲೂ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಜತೆಗೆ ಸ್ವಚ್ಛತೆಯ ಬಗ್ಗೆಯೂ ಗಮನ ಹರಿಸಬೇಕಾಗಿದೆ' ಎಂದು ಹೇಳಿದರು. ವಿದ್ಯುತ್ ಉತ್ಪಾದನಾ ಘಟಕದಲ್ಲಿ ಇತ್ತೀಚೆಗೆ ದುರಂತ ಸಂಭವಿಸಿ 5 ಮಂದಿ ಮೃತಪಟ್ಟಿದ್ದು, ಅವರ ಕುಟುಂಬದವರಿಗೆ ಕೆಪಿಸಿಎಲ್ ವತಿಯಿಂದ ತಲಾ 5 ಲಕ್ಷ ಪರಿಹಾರವನ್ನು ಶೀಘ್ರವೇ ವಿತರಿಸಲಾಗುವುದು. ಜತೆಗೆ ಘಟಕ ನಿರ್ವಹಿಸುವ ಕಂಪನಿಯಿಂದಲೂ ಸೂಕ್ತ ಪರಿಹಾರ ಒದಗಿಸಲಾಗುವುದು' ಎಂದು ಸಚಿವರು ತಿಳಿಸಿದರು.

### ಜಗಳೂರು: ಶಾಸಕ ಬಿ.ದೇವೇಂದ್ರಪ್ಪ ಭರವಸೆ

# ವಿವಿಧ ಕೆರೆಗಳಿಗೆ ಶೀಘ್ರ ನೀರು



ಜಗಳೂರು ತಾಲ್ಲೂಕಿನ ಮಲೆಮಾಚಿಕೆರೆ ಗ್ರಾಮದಲ್ಲಿ ಶಾಸಕ ಬಿ. ದೇವೇಂದ್ರಪ್ಪ ಅವರು ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು.

**ಜಗಳೂರು:** ತುಂಗಭದ್ರಾ ನದಿಯಿಂದ ತಾಲ್ಲೂಕಿನ 57 ಕೆರೆಗಳನ್ನು ತುಂಬಿಸುವ ಯೋಜನೆಯಡಿ ಶೀಘ್ರವೇ ಗುರುಸಿದ್ದಾಪುರದ ಹೊಸಕೆರೆ ಹಾಗೂ ಮಾಗಡಿ ಕೆರೆಗಳಿಗೆ ನೀರು ಹರಿಸಲಾಗುವುದು ಎಂದು ಶಾಸಕ ಬಿ. ದೇವೇಂದ್ರಪ್ಪ ಹೇಳಿದರು.

ತಾಲ್ಲೂಕಿನ ಮಲೆಮಾಚಿಕೆರೆ ಹಾಗೂ ಹೊಸಕೆರೆ ಗ್ರಾಮದಲ್ಲಿ 4 ಕೋಟಿ ವೆಚ್ಚದ ಸಿ.ಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಗುರುಸಿದ್ದಾಪುರ, ಮಾಗಡಿ ಕೆರೆಗಳಿಗೆ ಪೈಪ್‌ಲೈನ್ ಕಾಮಗಾರಿಗೆ ಎದುರಾಗಿರುವ ಅರಣ್ಯ ಇಲಾಖೆಯ ಕಾನೂನು ತೊಡಕು ಸರಿಪಡಿಸಿ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಿ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಹೊಸಕೆರೆ, ಮಲೆಮಾಚಿಕೆರೆ ಗ್ರಾಮಗಳಲ್ಲಿ ತಲಾ 20 ಲಕ್ಷ ವೆಚ್ಚದ ಸಿ.ಸಿ ರಸ್ತೆ, ಸಿ.ಸಿ ಚರಂಡಿ ನಿರ್ಮಾಣ, ಸೊಕ್ಕೆ ಗ್ರಾಮದ 32 ಕಡೆ ಮನರೇಗಾದಡಿ 1.83 ಕೋಟಿ ವೆಚ್ಚದ ಸಿ.ಸಿ ಚರಂಡಿ ನಿರ್ಮಾಣ, ಮಾಗಡಿ ಗ್ರಾಮದಲ್ಲಿ ?50 ಲಕ್ಷ ವೆಚ್ಚದ ಸಿ.ಸಿ ರಸ್ತೆ, ಬಸವನಕೋಟೆ ಗ್ರಾಮದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದಲ್ಲಿ ?1 ಕೋಟಿ ವೆಚ್ಚದಲ್ಲಿ ಸಿ.ಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು.


'ಶಿಥಿಲಾವಸ್ಥೆಯಲ್ಲಿರುವ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಕಟ್ಟಡವನ್ನು ನೆಲಸಮಗೊಳಿಸಿ ಮರೇನಹಳ್ಳಿ ರಸ್ತೆಯಲ್ಲಿ 5 ಎಕರೆ ಸರ್ಕಾರಿ ಜಮೀನಿನಲ್ಲಿ ನೂತನ ಕಟ್ಟಡ ನಿರ್ಮಿಸುವ ಯೋಜನೆ ಇದೆ.

ಕೆಎಸ್‌ಆರ್‌ಟಿಸಿ ಬಸ್ ಡಿಪೊಗೆ ಅನುದಾನ ನೀಡುವಂತೆ ಅಧಿವೇಶನ ದಲ್ಲಿ ಪ್ರಸ್ತಾಪಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಕೆಪಿಸಿಸಿ ಎಸ್‌ಟಿ ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್, ಬಸವನಕೋಟೆ ಗ್ರಾ.ಪಂ ಅಧ್ಯಕ್ಷೆ ಮರಿಯಮ್ಮ, ಸದಸ್ಯರಾದ ಬಸವರಾಜ್, ದೇವರಾಜ್, ಸೊಕ್ಕೆ ಗ್ರಾ.ಪಂ ಸದಸ್ಯ ರಾಜಪ್ಪ ಇದ್ದರು.

# ಮಿಶ್ರ ಬೆಳೆಗಳತ್ತ ಗಮನಹರಿಸಿ: ಗಿರಿಜೇಶ್

### ಕುಂದೂರು ಗ್ರಾಮದಲ್ಲಿ ತೋಟಗಾರಿಕೆ ಬೆಳೆಗಳ ಮಾಹಿತಿ ಕಾರ್ಯಾಗಾರ




ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ ತೋಟಗಾರಿಕೆ ಬೆಳೆಗಳ ಬಗ್ಗೆ ಹಮ್ಮಿಕೊಂಡಿದ್ದ ಮಾಹಿತಿ ಕಾರ್ಯಾಗಾರವನ್ನು ಜಿ.ಕೆ. ಗಿರಿಜೇಶ್ ಉದ್ಘಾಟಿಸಿದರು.

**ಹೊನ್ನಾಳಿ:** ಜಿಲ್ಲೆಯಲ್ಲಿ ಅಡಿಕೆ ಬೆಳೆಯ ವಿಸ್ತೀರ್ಣ ಇತ್ತೀಚೆಗೆ ಎರಡು ಪಟ್ಟು ಹೆಚ್ಚಿದ್ದು, ರೈತರು ಒಂದೇ ಬೆಳೆ ಮೇಲೆ ಅವಲಂಬಿತರಾಗದೆ ಅಂತರ ಬೆಳೆ ಹಾಗೂ ಮಿಶ್ರ ಬೆಳೆಗಳನ್ನು ಬೆಳೆಯಬೇಕು ಎಂದು ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಜಿ.ಕೆ. ಗಿರಿಜೇಶ್ ಸಲಹೆ ನೀಡಿದರು.

ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ ಕತ್ತಲಗೆರೆ ವಿಸ್ತರಣಾ ಶಿಕ್ಷಣ ಘಟಕ, ಕ್ಯಾಲಿಕಟ್‌ನ ಅಡಿಕೆ ಮತ್ತು ಸಾಂಬಾರು ಬೆಳೆಗಳ ಅಭಿವೃದ್ಧಿ ನಿರ್ದೇಶನಾಲಯ, ಸ್ಥಳೀಯ ರೈತ ಸಂಪರ್ಕ ಕೇಂದ್ರ ಮತ್ತು ಕೃಷಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ತೋಟಗಾರಿಕಾ ಬೆಳೆಗಳ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಅಡಿಕೆ ನಾಟಿ ಮಾಡಿದ ಆರಂಭದಲ್ಲಿ ಜೋಳ, ಟೊಮೆಟೊ, ಅಲಸಂದೆ, ಹುರುಳಿ, ಸೋಯಾಬೀನ್, ಬೆಂಡೆ, ಸೇವಂತಿಗೆ, ಮಲ್ಲಿಗೆ, ಸುಗಂಧರಾಜ ಬೆಳೆಯಬಹುದು. 5 ರಿಂದ 7 ವರ್ಷಗಳ ನಂತರ ಅಡಿಕೆ ತೋಟಗಳಲ್ಲಿ ವೀಳ್ಯದೆಲೆ, ಕಾಳುಮೆಣಸು, ಕೊಕೊ, ಕಾಫಿ, ಏಲಕ್ಕಿ ಬೆಳೆಯಲು ಅವಕಾಶವಿದೆ. ಸಾವಯವ ಗೊಬ್ಬರ ಬಳಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಳವಾಗಿ, ಆದಾಯವೂ ಅಧಿಕವಾಗುತ್ತದೆ ಎಂದರು. ಮಣ್ಣು ಮತ್ತು ನೀರು ಪರೀಕ್ಷೆ ಮಾಡಿಸಿ ಅದರ ಫಲಿತಾಂಶದ ಅನುಸಾರವಾಗಿ ಸಮತೋಲಿತ ಗೊಬ್ಬರ, ಪೋಷಕಾಂಶ ಕೊಡಬೇಕು ಎಂದು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬಸವನಗೌಡ ತಿಳಿಸಿದರು.

ಮೆಕ್ಕೆಜೋಳದಲ್ಲಿ ಮುಳ್ಳುಸಜ್ಜೆ ಮತ್ತು ಸೈನಿಕ ಹುಳು ನಿಯಂತ್ರಣಕ್ಕೆ ನಮ್ಮ ವಿಶ್ವವಿದ್ಯಾಲಯ ಆವಿಷ್ಕರಿಸಿರುವ ತಾಂತ್ರಿಕತೆಯನ್ನು ಬಳಕೆ ಮಾಡಬಹುದು ಎಂದು ಕೃಷಿ ವಿದ್ಯಾಲಯದ ಬೇಸಾಯ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಎಚ್.ಕೆ. ವೀರಣ್ಣ ಸಲಹೆ ನೀಡಿದರು.

ಕಾಳು ಮೆಣಸು ತಜ್ಞ ಎಚ್.ಪಿ. ಸುದೀಪ್ ಬಿಸಾಟಿ, ವೈಜ್ಞಾನಿಕವಾಗಿ ಕಾಳುಮೆಣಸು ಬೆಳೆಯುವ ವಿಧಾನದ ಬಗ್ಗೆ ವಿವರಿಸಿದರು.

ಕತ್ತಲಗೆರೆ ಕೇಂದ್ರದ ಮುಖ್ಯಸ್ಥ ಬಿ.ಎಂ. ಆನಂದಕುಮಾರ್, ವಿಸ್ತರಣಾ ಶಿಕ್ಷಣ ಘಟಕದ ವಿಸ್ತರಣಾಧಿಕಾರಿ ಗಂಗಪ್ಪಗೌಡ ಬಿರಾದಾರ ಮಾತನಾಡಿದರು. ಕುಂದೂರು ಗ್ರಾ.ಪಂ. ಅಧ್ಯಕ್ಷೆ ಬಿ.ಎಂ. ಲತಾ, ಪ್ರಾಥಮಿಕ ಕೃಷಿ ಪತ್ತಿನ ಸಂಘದಪ ಪದಾಧಿಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮದ 150ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

# ದೊಡ್ಡಾಸ್ಪತ್ರೆಯಲ್ಲಿ ಶವ ಪರೀಕ್ಷೆ ತಜ್ಞರಿಲ್ಲ!



**ತುಮಕೂರು:** ಜಿಲ್ಲಾ ಆಸ್ಪತ್ರೆಯಲ್ಲಿ ಕಳೆದ ಆರು ತಿಂಗಳಿನಿಂದ ಮರಣೋತ್ತರ ಪರೀಕ್ಷೆಯ ತಜ್ಞರ ಹುದ್ದೆ ಖಾಲಿ ಇದ್ದು, ಸಾಮಾನ್ಯ ವೈದ್ಯರಿಂದ ಮರಣೋತ್ತರ ಪರೀಕ್ಷೆ ಮಾಡಿಸಲಾಗುತ್ತಿದೆ.

ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಕಳೆದ 3 ವರ್ಷದಲ್ಲಿ 3,127 ಶವ ಪರೀಕ್ಷೆ ಮಾಡಲಾಗಿದೆ. ವರ್ಷಕ್ಕೆ ಸರಾಸರಿ 1 ಸಾವಿರಕ್ಕೂ ಹೆಚ್ಚು ಶವಗಳು ಶವಾಗಾರಕ್ಕೆ ಬರುತ್ತಿವೆ. ಸಾಮಾನ್ಯ ವೈದ್ಯರು ನೀಡುವ ಶವ ಪರೀಕ್ಷಾ ವರದಿ ಎಷ್ಟು ನಿಖರವಾಗಿರುತ್ತದೆ ಎಂಬ ಅನುಮಾನಗಳು ಸಾರ್ವಜನಿಕ ವಲಯದಿಂದ ವ್ಯಕ್ತವಾಗುತ್ತಿವೆ.

ಪೋಸ್ಟ್ ಮಾರ್ಟಂಗೆ ಬರುವ ಶವಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. 2023ರಲ್ಲಿ 969 ಶವ ಪರೀಕ್ಷೆ ನಡೆಸಿದರೆ, 2024ಕ್ಕೆ ಈ ಸಂಖ್ಯೆ ಸಾವಿರದ ಗಡಿ ದಾಟಿದೆ. ತಜ್ಞ ವೈದ್ಯರನ್ನು ನೇಮಿಸಿ ನಿಖರ ಮಾಹಿತಿ, ಸಕಾಲಕ್ಕೆ ವರದಿ ನೀಡುವ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಶವಾಗಾರದಲ್ಲಿ ಗ್ರೂಪ್?ಡಿ 2 ಹುದ್ದೆಗಳು ಖಾಲಿ ಉಳಿದಿವೆ.

ಅನುಮಾನಾಸ್ಪದ ರೀತಿಯಲ್ಲಿ ಸಾವನ್ನಪ್ಪಿದವರ ಮರಣೋತ್ತರ ಪರೀಕ್ಷೆಯ ವರದಿ ನೀಡುವಲ್ಲಿ ವಿಳಂಬವಾಗುತ್ತಿದೆ. ಕೊಲೆ, ಆತ್ಮಹತ್ಯೆ, ರೈಲಿಗೆ ತಲೆಕೊಟ್ಟು, ವಿಷ ಸೇವಿಸಿ ಆತ್ಮಹತ್ಯೆ, ಅಪಘಾತ, ಹಾವು ಕಚ್ಚಿ ಸಾವನ್ನಪ್ಪಿರುವುದು ಸೇರಿದಂತೆ ಇತರೆ ಪ್ರಕರಣಗಳಲ್ಲಿ ಕಡ್ಡಾಯವಾಗಿ ಶವ ಪರೀಕ್ಷೆ ಮಾಡಿಸಲಾಗುತ್ತದೆ. ಈ ವರದಿ ಆಧಾರದ ಮೇಲೆಯೇ ಪೊಲೀಸರು ಮುಂದಿನ ಕ್ರಮ ಕೈಗೊಳ್ಳುತ್ತಾರೆ. ಸಮರ್ಪಕ ಹಾಗೂ ನಿಖರವಾದ ಮಾಹಿತಿ ಸಿಗದೆ ಪೊಲೀಸರ ತನಿಖೆಯೂ ಕಷ್ಟಕರವಾಗುತ್ತಿದೆ. ಶವ ಪರೀಕ್ಷೆ ನಡೆಸಿದ 24 ಗಂಟೆಯ ಒಳಗೆ ವರದಿ ನೀಡಬೇಕು. ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಲ್ಲಿ ವರದಿ ನೀಡಲು ತಡವಾಗುತ್ತಿದೆ.

ತಜ್ಞರು ಇದ್ದರೆ ನಿಖರ ಮಾಹಿತಿ ನೀಡುತ್ತಾರೆ. ಕೆಲವು ಪ್ರಕರಣಗಳಲ್ಲಿ ಖಾಸಗಿ ಆಸ್ಪತ್ರೆ ಅವಲಂಬಿಸಬೇಕಾಗುತ್ತದೆ. ಇನ್ನೂ ಕೆಲವು ಸಲ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆ ವರೆಗೂ ಶವ ಸಾಗಿಸಿ ವರದಿ ಪಡೆದ ಉದಾಹರಣೆಗಳಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

'ಅಗತ್ಯವಾಗಿ ಮರಣೋತ್ತರ ಪರೀಕ್ಷೆ ವರದಿ ಬೇಕಾದ ಪ್ರಕರಣಗಳಲ್ಲಿಯೇ ವರದಿ ಕೈ ಸೇರಲು ತಡವಾಗುತ್ತದೆ. ವೈದ್ಯರು ಸಿಗದೆ ಸ್ಥಳೀಯ ಖಾಸಗಿ ಆಸ್ಪತ್ರೆಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಇದರಿಂದ ತನಿಖೆ ವೇಗ ಪಡೆಯುವುದಿಲ್ಲ. ಪ್ರಕರಣಗಳ ವಿಲೇವಾರಿಯೂ ವಿಳಂಬವಾಗುತ್ತದೆ' ಎಂದು ಹೇಳುತ್ತಾರೆ.

# ಎಫ್‌ಎಸ್‌ಟಿಪಿ ಘಟಕ ಸ್ಥಾಪನೆಗೆ ವಿರೋಧ



**ಕೊರಟಗೆರೆ:** ಇಲ್ಲಿನ ಪಟ್ಟಣ ಪಂಚಾಯಿತಿಯಿಂದ ಎಫ್‌ಎಸ್‌ಟಿಪಿ ಘಟಕ ಸ್ಥಾಪನೆಗೆ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ 3 ಎಕರೆ ಭೂ ಮಂಜೂರಾತಿಗೆ ತಹಶೀಲ್ದಾರ್ ಕೆ.ಮಂಜುನಾಥ್ ನೇತೃತ್ವದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳ ತಂಡ ಸರ್ವೆಗೆ ಮುಂದಾದಾಗ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದರು.

ಎಫ್‌ಎಸ್‌ಟಿಪಿ ಘಟಕ ನಿರ್ಮಾಣಕ್ಕೆ ಸರ್ವೆ ನಂ 181ರಲ್ಲಿ ಸರ್ಕಾರಿ ಗೋಮಾಳದಲ್ಲಿ 3 ಎಕರೆ ಭೂಮಿ ನೀಡುವಂತೆ ಪ.ಪಂ ಅಧಿಕಾರಿಗಳು ಕಂದಾಯ ಇಲಾಖೆಗೆ ಮನವಿ ಸಲ್ಲಿಸಿದ್ದರು. ಜಿಲ್ಲಾಧಿಕಾರಿ ಆದೇಶದನ್ವಯ ತಹಶೀಲ್ದಾರ್ ಕೆ.ಮಂಜುನಾಥ್ ನೇತೃತ್ವದಲ್ಲಿ ಅಧಿಕಾರಿಗಳು ಸರ್ವೆ ಮಾಡಿ ಶೀಘ್ರದಲ್ಲಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗಂಗಾಧರೇಶ್ವರ ಕೆರೆಗೆ ಈ ಕಾಲುವೆ ಮೂಲಕವೇ ನೀರು ಹರಿಯಲಿದೆ. ಕಾಲುವೆ ನೀರನ್ನು ಪ್ರಾಣಿ ಪಕ್ಷಿಗಳು ಸೇವಿಸುತ್ತವೆ. ತ್ಯಾಜ್ಯದಿಂದ ಪರಿಸರ ಮಾಲಿನ್ಯ ಜೊತೆಗೆ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ವಿರೋಧ ವ್ಯಕ್ತಪಡಿಸಿದರು.

ಈ ವೇಳೆ ಕಂದಾಯ ಇಲಾಖೆ ಅಧಿಕಾರಿ ಬಸವರಾಜು, ಆರೋಗ್ಯ ನಿರೀಕ್ಷಕ ಹುಸೇನ್, ಸರ್ವೆ ಅಧಿಕಾರಿ ನಾಗಲಾಂಭಿಕೆ, ಪಟ್ಟಣ ಪಂಚಾಯಿತಿಯ ವೇಣುಗೋಪಾಲ್, ಪ.ಪಂ ಸದಸ್ಯ ನಂದೀಶ್ ಇದ್ದರು.

ಎಫ್‌ಎಸ್‌ಟಿಪಿ ಘಟಕ ನಿರ್ಮಾಣದಿಂದ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಬಹುಮುಖ್ಯ ಪಾತ್ರ ವಹಿಸುತ್ತದೆ. 3 ಎಕರೆ ಪ್ರದೇಶದಲ್ಲಿ ?3.5 ಕೋಟಿ ವೆಚ್ಚದಲ್ಲಿ ಈ ಘಟಕ ಸ್ಥಾಪನೆಯಾಗಲಿದ್ದು, ಕಸ ವಿಲೇವಾರಿ ಘಟಕಕ್ಕೆ ಈ ಸ್ಥಳ ಬಳಸುವುದಿಲ್ಲ. ರೈತರಿಗೆ ಮತ್ತು ಸ್ಥಳೀಯರಿಗೆ ಸುಳ್ಳು ಸುದ್ದಿ ಹಬ್ಬಿಸಲಾಗಿದೆ. ಆರೋಗ್ಯ ಮತ್ತು ಪರಿಸರಕ್ಕೆ ಹಾನಿ ಉಂಟಾಗುವುದಿಲ್ಲ ಎಂದು ಪ.ಪಂ ಮುಖ್ಯಾಧಿಕಾರಿ ಉಮೇಶ್ ಹೇಳಿದರು.

**Printed by :** S.T. NAVEEN KUMAR,No - 49B, LIG, 4th Cross, Near Sadiq Nagara Water Tank, K.H.B Colony, Chitradurga -577501, Chitradurga Dist. Karnataka. **Published by :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598, Chitradurga Dist, Karnataka. **Owned by :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka. **Printed at : NITHYA PRINTERS**,No - 49B, LIG, 4th Cross, Near Sadiq Nagara Water Tank, K.H.B Colony, Chitradurga -577501,Chitradurga Dist. Karnataka. **Published at :** At Sree Raghavendra Nilaya,Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka. **Editor :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka.